Mr. SPEAKER.—The programme of election will follow.

The House will now adjourn for lunch and meet again after half an hour.

The House adjourned for Lunch at Ten Minutes past Three of the Clock and re-assembled at Forty Minutes past Three of the Clock.

[Sri M. M. PATIL in the Chair]

MYSORE MOTOR VEHICLES TAXATION BILL, 1957.

Motion to consider (continued)

Mr. CHAIRMAN (SRI M. M. PATIL).—Consideration of Bills. Further discussion on the Mysore Motor Vehicles Taxation Bill, 1957. Who is going to speak on this Bill ?

Sri U. S. NAYAK (Udipi).—Sir, I seek a clarification. Under section 19, local authorities should not levy taxes. I should like to bring to the notice of the Hon'ble the Minister that in our District of South Kanara, local authorities, *i.e.*, the Panchayet Board and the Municipalities, are levying tolls or taxes in the guise of bus taxes. I would request the Hon'ble Minister to insert or to see that they are prohibited from collecting such taxes. I want the Hon'ble Minister also to enlighten me as to whether tolls means bridge tolls, and whether bridge tolls are also exempted.

*Sri C. M. POONACHA (Home Minister).—The clause here contemplates abolition of any levies in the form of taxes or tolls. But it does not preclude the collection of fees for certain amenities so provided. These are two distinct things. I provide certain amenities to you and I collect some fees in relation to the amenities that are provided. They are separate. It is not covered under this Act to preclude the collection of such fees for known amenities provided for transport services. That comes under a separate category. With regard to the levy of tolls and taxes by any local authority, whether a Panchayet Board or a Municipality, they are completely prohibited under the present Bill. That is the spirit ofthe Bill as it stands now.

*ಶ್ರೀ ಬಿ. ಎಸ್. ಶಂಕರಪ್ಪ (ಹೊಸದುರ್ಗ) —ಮಾನ್ಯ ಅಧ್ಯಕ್ಷರೇ, ಸರ್ಕಾರದವರು ನಮ್ಮ ಮುಂದೆ ವಾಹನಗಳ ಮೇಲೆ ಹೇರಿರತಕ್ಕ ಸುಂಕದ ಬಿಲ್ಲು ಇಟ್ಟು ಅದೀಗ ಸೆಲೆಕ್ಟ್ ಕಮಿಟಿಯಿಂದ ಬಹಳವಾಗಿ ತಿದ್ದುಪಡಿಯಾಗಿ ಈಗ ನಮ್ಮ ಮುಂದೆ ಬಂದಿದೆ. ನಾವು ಮೊದಲು, ಮೈಸೂರು ಸಣ್ಣ ದೇಶವಾಗಿದ್ದಾಗ ಎಷ್ಟು ಸಂಚಾರ ಸೌಲಭ್ಯಗಳನ್ನು ಒದಗಿಸಬೇಕೆಂದು ಹೇಳಿ ದೇಶಾದ್ಯಂತ ಬಸ್ ಸೌಕರ್ಯಗಳನ್ನು ಎಷ್ಟು ಮಟ್ಟಿಗೆ ಏರ್ಪಡಿಸಿದ್ದೆವೋ ಅದಕ್ಕಿಂತ ಹೆಚ್ಚಾಗಿ ಈಗ ದೇಶ ವಿಶಾಲವಾಗಿರುವಾಗ ಮತ್ತು ಜನರು ಬಹಳ ದೂರದಿಂದ ಬರತಕ್ಕ ಸಂದರ್ಭವಿರುವಾಗ ಸಂಚಾರ ಸೌಲಭ್ಯಗಳಿಗೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕಾದದ್ದು ಸರ್ಕಾರದವರ ಪವಿತ್ರ ಕರ್ತವ್ಯ. ಆದರೆ ಮೊನ್ನೆ ಸಭೆಯ ಮುಂದೆ ಬಂದಿದ್ದ ಸೇಲ್ಸ್ ಟ್ಯಾಕ್ಸ್ ಮಸೂದೆಯ ಪ್ರಕಾರ, ವಾಹನಗಳ ಸ್ಪೇರ್ ಪಾರ್ಟ್‌ಗಳಿಗೆ ಹೆಚ್ಚಿನ ಸೇಲ್ಸ್ ಬಿದ್ದು ಅವುಗಳ ದರ ಏರಿದೆ. ಮತ್ತು ಪರದೇಶಗಳಿಂದ ಬರತಕ್ಕ ಕೆಲವು ಡೀಸೆಲ್ ಎಂಜಿನ್‌ಗಳ ಸಂಖ್ಯೆ ಕೂಡ ಕಡಮೆಯಾಗುತ್ತಿದೆ. ಬಸ್ ಮಾಲೀಕರುಗಳು ತಮಗೆ ಬೇಕಾಗುವ ಉಪಕರಣಗಳಿಗೆ ವಿಪರೀತ ಹೆಚ್ಚಿನ ಬೆಲೆ ಕೊಡ ಬೇಕಾಗಿ ಬಂದಿದೆ. ಇಂಥ ಸಂದರ್ಭದಲ್ಲಿ ಈ ಬಿಲ್ಲಿನಲ್ಲಿ ಟ್ಯಾಕ್ಸನ್ನು ಹಿಂದೆ ಇರುವುದಕ್ಕೆ ಒಂದಕ್ಕೆ ಒಂದೂವರೆಯಷ್ಟು, ಕೆಲವು ಸಂದರ್ಭಗಳಲ್ಲಿ ಮೂರು ನಾಲ್ಕರಷ್ಟು ಹೇರಿರುವುದು ಬಹಳ ಅನ್ಯಾಯವೆಂದು ಹೇಳಬೇಕಾಗಿದೆ. ಸಾಮಾನ್ಯವಾಗಿ ಯಾವ ಒಂದು ಸುಂಕವನ್ನು ಹಾಕಬೇಕಾದರೂ ಒಂದು ನೀತಿಯಿರ ಬೇಕು. ಮಾನ್ಯ ಸಚಿವರು ಈಗ ಅನೇಕ ಸುಂಕದ ಮಸೂದೆಗಳನ್ನು ಈ ಅಧಿವೇಶನದಲ್ಲಿ ತಂದಿದ್ದಾರೆ. ಅವುಗಳನ್ನು ಸಭೆಯಲ್ಲಿ ಮಂಡಿಸುವಾಗ ಪ್ರತಿಯೊಂದು ಸಂದರ್ಭದಲ್ಲಿಯೂ ದೇಶ ಈಗ ವಿಶಾಲವಾದ ಮೇಲೆ ವಿವಿಧ ಭಾಗಗಳಲ್ಲಿ ಬೇರೆ ಬೇರೆ ರೀತಿಯಲ್ಲಿರುವ ತೆರಿಗೆಗಳನ್ನು ಸಮನ್ವಯಗೊಳಿಸಬೇಕೆಂದು ಹೇಳಿ ಒಂದೇ ದೃಷ್ಟಿಯಿಂದ ನಮ್ಮ ಮುಂದೆ ಒತ್ತಾಯ ಮಾಡುತ್ತಿದ್ದಾರೆ. ಕೊನೆಗೆ, ಈ ಬಿಲ್ಲಿನ ಸಂದರ್ಭದಲ್ಲಿಯೂ, ದೇಶದ ಎಲ್ಲಾ ಭಾಗಗಳಲ್ಲಿಯೂ ಒಂದೇ ರೀತಿಯಲ್ಲಿ ರಸ್ತೆಗಳನ್ನು ಸಮರ್ಪಕವಾಗಿರುವಂತೆ ಮಾಡಬೇಕಾಗಿರುವುದರಿಂದ, ಎಲ್ಲ ಕಡೆಗೂ ಒಂದೇ ರೀತಿಯ ಟ್ಯಾಕ್ಸ್ ಹಾಕ ಬೇಕಾಗಿದೆಯೆಂದು ಈ ಬಿಲ್ಲನ್ನು ಇಡುತ್ತಿದ್ದೇವೆಂದು ಹೇಳಿದ್ದೀರಿ. ಆದರೆ ಈ ಸಂದರ್ಭದಲ್ಲಿ ಮುಖ್ಯವಾಗಿ ಯಾವುದನ್ನು ಪರಿಶೀಲನೆಗೆ ತೆಗೆದುಕೊಳ್ಳಬೇಕಾಗಿತ್ತೋ ಅದನ್ನು ತೆಗೆದುಕೊಂಡಿಲ್ಲ. ಹೇಗೆಂದರೆ, ಹಿಂದೆ ಬಸ್ಸುಗಳಿಗೆ ಸೀಟಿಗೆ ಇಷ್ಟು ಎಂದು ಸುಂಕ ಕೊಡ ಬೇಕಾಗಿತ್ತು. ಮತ್ತು ರಸ್ತೆಯ ಮೇಲೆ ಸಂಚಾರ ಮಾಡಿದ ಹಾಗೆ Up and Down ಮೈಲಿಯೊಂದಕ್ಕೆ ಒಂದೂ ಕಾಲಾಣೆಯಂತೆ ಕೊಡಬೇಕಾಗಿತ್ತು. ಈ ವಿಧಾನದಲ್ಲಿ ಒಂದು ನ್ಯಾಯ, ನೀತಿ ಇತ್ತು. ಬಸ್ಸುಗಳು ಎಷ್ಟು ದೂರ ಓಡುತ್ತಿದ್ದವೋ ಅಷ್ಟು ದೂರಕ್ಕೆ ಸರಿಯಾಗಿ ಟ್ಯಾಕ್ಸ್ ಅವನ ಮೇಲೆ ಬೀಳುತ್ತಿತ್ತು. ಈಗಲಾದರೋ ಒಬ್ಬನು ಎಷ್ಟೇ ಮೈಲಿ ಓಡಿಸಲಿ, ಹಾಸನದಿಂದ ಹರಿಹರಕ್ಕೆ ಓಡಿಸಲಿ, ಅಥವಾ ಹೊಸದುರ್ಗ ರೈಲ್ವೆ ಸ್ಟೇಷನ್ನಿನಿಂದ ಹೊಸದುರ್ಗ ಟೌನ್‌ವರೆಗೆ ಮಾತ್ರ ಓಡಿಸಲಿ, ಅವನು ಬಸ್ಸಿಗೆ 30 ರೂಪಾಯಿಯಂತೆ ಕೊಡಬೇಕೆಂದು ಮಾಡಿದ್ದೀರಿ. ಆದರೆ ಒಂದೇನೋ ಇಲ್ಲಿ ಮಾಡಿರುವುದು ಸರಿಯಾಗಿದೆ. 60 ಮೈಲಿಯೊ

ಳಗೆ ಓಡಾಡುವ ಬಸ್ಸುಗಳಿಗೆ 25 ರೂಪಾಯಿ ಮಾತ್ರ ಕೊಡಬೇಕೆಂದು ಮಾಡಿದ್ದೀರಿ. ಇದು ನ್ಯಾಯವಾಗಿದೆ. ಆದರೆ ಹೀಗೆ ಯಾವ ಆಧಾರದ ಮೇಲೆ ಸೆಲೆಕ್ಟ್ ಕಮಿಟಿಯಲ್ಲಿ 5 ರೂಪಾಯಿಗಳನ್ನು ಕಡಮೆ ಮಾಡಿದರೋ ನನಗಂತೂ ಅರ್ಥವಾಗುವುದಿಲ್ಲ. ಅದಕ್ಕೆ ಸರಿಯಾದ ಯಾವ ಆಧಾರವೂ ಕಾಣಲಿಲ್ಲ. 70 ಮೈಲಿ ಓಡುವ ಬಸ್ಸುಗಳಿಗೂ 120 ಮೈಲಿ ಓಡುವ ಬಸ್ಸುಗಳಿಗೂ ವ್ಯತ್ಯಾಸವೇ ಇಲ್ಲ. ಕೆಲವು ಸಣ್ಣ ಪುಟ್ಟ ಬಸ್ ಮಾಲೀಕರು ತಾವು ಬಸ್ ನಡೆಸಿ ಅದರಿಂದ ಜೀವನಮಾಡಿಕೊಂಡಿರುವ ಕೆಲವು ಉದಾಹರಣೆಗಳಿವೆ. ಅಂಥವರಿಗೆ ತೊಂದರೆ ಯಾಗುತ್ತದೆ. ಅವರಿಗೆ ಉತ್ತಮವಾದ ಲೈನುಸಿಕ್ಕುವುದಕ್ಕೆ ಅವಕಾಶವಿಲ್ಲ. 70 ಮೈಲಿ ಬಸ್ ಓಡಿಸುವವರು ತಮ್ಮ ಬಸ್ಸಿನಲ್ಲಿ 34 ಸೀಟುಗಳಿದ್ದರೆ ಅದಕ್ಕೆಲ್ಲಾ ಹೆಚ್ಚು ಸುಂಕ ಕೊಡಬೇಕಾಗುವುದರಿಂದ ಅನಾನುಕೂಲವಾಗಿ ಬಸ್ ಸಂಚಾರ ನಿಲ್ಲಬಹುದೆಂದು ಹೇಳಿದರೆ ತಪ್ಪಾಗಲಾರದು. ಸುಂಕ ಹಾಕುವುದಕ್ಕೆ ಮೊದಲು ಸರ್ಕಾರದ ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆ ಏನಿದೆ ಅದಕ್ಕೆ ಹಾಕಿರುವ ಬಂಡವಾಳವೆಷ್ಟು, ಅದರ ಬಡ್ಡಿಯೇನು, ಸೀಟ್ ಟ್ಯಾಕ್ಸ್ ಎಷ್ಟು, ರಿಜಿಸ್ಟ್ರೇಷನ್ ಫೀಜು ಎಷ್ಟು ಎಂದು ಲೆಕ್ಕ ಹಾಕಿ, ಅದರಿಂದ ವರಮಾನವೇನು ಬರುತ್ತಿದೆಯೆಂದು ನೋಡಿ ಇತರ ಬಸ್ ಮಾಲೀಕರಿಗೇನು ವರಮಾನ ಬರಬಹುದೆಂಬುದನ್ನು ಆಲೋಚನೆಮಾಡಿ ಸೀಟುಗಳಿಗೆ ಒಂದು ಯೂನಿಫಾರಂ ಟ್ಯಾಕ್ಸ್ ನಿಗದಿಮಾಡುವುದಕ್ಕೆ ಬದಲಾಗಿ ಬಸ್ಸುಗಳು ಓಡುವ ಮೈಲಿಗೆ ತಕ್ಕಂತೆ ಕಡಮೆ ದರದಲ್ಲಿ ಸೀಟ್ ಟ್ಯಾಕ್ಸ್ ನಿಗದಿಮಾಡಿ ಮೈಲಿಗೆ ಅದನ್ನು ನಾಲ್ಕಾಣೆಯಂತಾದರೂ ನಿಗದಿ ಮಾಡಬೇಕಾಗಿತ್ತು. ಈಗ ಯೂನಿಫಾರಂ ದರ ನಿಗದಿ ಮಾಡುವುದಕ್ಕೆ ಹೊರಟು ರಸ್ತೆ ಕೆಟ್ಟಿರುವುದನ್ನು ಗಮನಿಸಿ ಅದನ್ನು ಸರಿಯಾದ ಸ್ಥಿತಿಯಲ್ಲಿಡಲು ತೆರಿಗೆ ಹಾಕಿರುವುದು ಒಪ್ಪತಕ್ಕದ್ದೇ ಆದರೂ ಎಷ್ಟು ದೂರ ಯಾವಯಾವ ಬಸ್ಸು ಓಡುತ್ತದೆಂಬುದನ್ನು ಗಮನಿಸಿ ಅದಕ್ಕೆ ತಕ್ಕಂತೆ ತೆರಿಗೆ ವಿಧಿಸದೆ 60 ಮೈಲಿಗಳಿಗೆ 5 ರೂಪಾಯಿ ಕಡಮೆ ಮಾಡುವುದು ಸರಿಯಲ್ಲವೆಂದು ಅದನ್ನು ತುಂಬ ವಿರೋಧಿಸುತ್ತೇನೆ. ಇಂಥ ಮಸೂದೆಯನ್ನು ತರುವಾಗ ಬೊಂಬಾಯಿ ಪ್ರಾಂತದಿಂದ ಬಂದ ಕರ್ಣಾಟಕದ ಭಾಗಗಳು, ಕೊಡಗಿನಿಂದ ಬಂದಿರುವ ಭಾಗಗಳು ಅಲ್ಲೆಲ್ಲಾ ಒಂದೇ ವಿಧವಾದ ಕಾನೂನನ್ನು ಅನ್ವಯಿಸಬೇಕಾಗಿ ಬಂತು, ಆದ್ದರಿಂದ ಈ ಮಸೂದೆ ತಂದಿದೆಯೆಂದು ವಾದ ಮಾಡಿದ್ದಾರೆ. ಆದರೆ ಈ ದಿವಸ ಎಷ್ಟು ರಸ್ತೆಗಳಲ್ಲಿ ಬಸ್ ಸಂಚಾರವಿದೆ, ರಸ್ತೆ ಪರಿಸ್ಥಿತಿ ಏನಾಗಿದೆ, ಬಸ್‌ಗಳ ವೇರ್ ಅಂಡ್ ಟೇರ್ ಎಷ್ಟು, ಎಲ್ಲೆಲ್ಲಿ ಸಿಮೆಂಟ್ ರಸ್ತೆ, ಟಾರು ರಸ್ತೆ ಇದೆ ಎಂಬುದನ್ನು ಸಹ ಗಮನಿಸಬೇಕಾಗಿತ್ತು. 60 ಮೈಲಿ ಓಡಾಡುವ ಬಸ್ಸುಗಳಿಗೆಷ್ಟು ಖರ್ಚಿದೆ, 70 ಮೈಲಿ ಓಡಾಡುವ ಬಸ್ಸುಗಳಿಗೆಷ್ಟು ಖರ್ಚಿದೆ, ಅವುಗಳು ಯಾವ ಯಾವ ರಸ್ತೆಗಳಲ್ಲಿ ಓಡಾಡುತ್ತಿವೆ, ಆ ರಸ್ತೆಗಳ ಸ್ಥಿತಿ ಹೇಗಿದೆ, ಬಸ್‌ಗಳ ವೇರ್ ಅಂಡ್ ಟೇರ್ ಎಲ್ಲಿ ಜಾಸ್ತಿ ಎಂಬುದನ್ನೆಲ್ಲಾ ಆಲೋಚನೆ ಮಾಡಬೇಕಾಗಿತ್ತು. ಆ ರೀತಿ ಸರ್ಕಾರದವರು ಎಲ್ಲ ಅಂಶಗಳನ್ನೂ ಪರ್ಯಾಲೋಚಿಸದೆ ಸುಮ್ಮನೆ ತೆರಿಗೆ ಹೇರಿ ಖೋತಾ ಬಡ್ಜೆಟ್ ಇರುವುದನ್ನು ಸರಿದೂಗಿಸಿಕೊಳ್ಳಲು ದುಡ್ಡು ಬೇಕೆಂದು ಈ ರೀತಿ ಮಸೂದೆಯನ್ನು ತರುವುದಾದರೆ ಜನರಿಗೆ ಬಹಳ ಅನ್ಯಾಯ ಮಾಡಿದಂತಾಗುತ್ತದೆ. ಇದನ್ನು ಸರ್ಕಾರ ಆಲೋಚನೆ ಮಾಡಬೇಕಾಗಿತ್ತು.

ಆಮೇಲೆ ವ್ಯವಸಾಯಕ್ಕಾಗಿ ಉಪಯೋಗಿಸುವ ವಾಹನ, ಟ್ರ್ಯಾಕ್ಟರು ಮುಂತಾದುವುಗಳ ವಿಚಾರದಲ್ಲಿ ವಿನಾಯಿತಿ ತೋರಿಸಬೇಕೆಂದು ಅವಕಾಶ ಮಾಡಿದೆ. ಆದರೆ ಎಷ್ಟು ವಿಸ್ತೀರ್ಣದಲ್ಲಿ ಅವಕಾಶವಿದೆ, ವ್ಯವಸಾಯದ ಉತ್ಪನ್ನಗಳನ್ನು ಮಾರ್ಕೆಟ್ಟಿಗೆ ಸಾಗಿಸುವಾಗ ಎಷ್ಟು ದೂರದವರೆಗೆ ಅವಕಾಶವಿದೆ ಎಂಬುದು ಸ್ಪಷ್ಟವಾಗಿ ನಮೂದಾಗಿಲ್ಲ. ಮುಂದೆ ಈ ವಿಚಾರದಲ್ಲಿ ತೊಂದರೆಯಾದಾಗ ಇದನ್ನು ಕ್ಲಾರಿಫೈ ಮಾಡುವವರು ಯಾರು? ಇದನ್ನೆಲ್ಲಾ ಆಲೋಚನೆಮಾಡಿ ತಕ್ಕ ವ್ಯವಸ್ಥೆ ಮಾಡಬೇಕಾಗಿತ್ತು.

ಈ ಬಿಲ್ಲನ್ನು ತರಬೇಕಾದರೆ ಯಾವ ಉದ್ದೇಶಕ್ಕಾಗಿ ತರುತ್ತಿದೆ, ಅದರಿಂದ ಬರುವ ದುಡ್ಡು ಯಾವ ಉದ್ದೇಶಕ್ಕಾಗಿ ಖರ್ಚಾಗುತ್ತದೆ ಎಂಬುದನ್ನು ಸ್ಪಷ್ಟಪಡಿಸಿದ್ದರೆ ಬಹಳ ಚೆನ್ನಾಗಿತ್ತು. ಈ ದಿವಸ ಅನೇಕ ರಸ್ತೆಗಳು ಕೆಟ್ಟಿವೆ. ಅದನ್ನು ಪರಿಶೀಲಿಸಿ ಎಲ್ಲೆಲ್ಲಿ ರಸ್ತೆಗಳು ಚೆನ್ನಾಗಿಲ್ಲ, ಎಲ್ಲೆಲ್ಲಿಗೆ ಈ ಸುಂಕದಿಂದ ಬರುವ ಹಣ ಉಪಯೋಗವಾಗಬೇಕು, ಎಲ್ಲಿ ಟಾರು, ಸಿಮೆಂಟ್ ರಸ್ತೆ ಮಾಡಬೇಕಾಗಿದೆ ಎಂದು ಸಂಸ್ಥಾನದಾದ್ಯಂತ ಒಂದು ಪಟ್ಟಿಮಾಡಿ ಅದರ ಖರ್ಚುವೆಚ್ಚವನ್ನು ಲೆಕ್ಕಹಾಕಿ ಆ ಬಗ್ಗೆ ಈ ಮಸೂದೆಯನ್ನು ತಂದಿದೆಯೆಂದು ಹೇಳಿದ್ದಾರೆಯೇ ಎಂದರೆ ಅದೂ ಇಲ್ಲ. ಹೇಗಾದರೂ ಮಾಡಿ ಸರ್ಕಾರದ ಬೊಕ್ಕಸ ತುಂಬಿಕೊಳ್ಳಬೇಕೆಂದಿರುವಂತೆ ತೋರುತ್ತಿದೆ. ಸಂಚಾರ ಸೌಲಭ್ಯ ಹೆಚ್ಚಿಸುವುದಕ್ಕಾಗಿ ಈ ತೆರಿಗೆ ಹಾಕಿದಂತೆ ಕಾಣುತ್ತಿಲ್ಲ. ಇದು ಬಹಳ ಅನ್ಯಾಯ. ಒಟ್ಟಿನ ಮೇಲೆ ದುಡ್ಡು ಬೇಕೆಂದು ಈ ತೆರಿಗೆ ಮಸೂದೆ ತಂದಿರುವುದರಿಂದ ಇದನ್ನು ವಿರೋಧಿಸಿ ಅಧ್ಯಕ್ಷರು ಮಾತನಾಡಲು ನನಗೆ ಅವಕಾಶಕೊಟ್ಟದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಗುಬ್ಬಿ).—ಅಧ್ಯಕ್ಷರೆ, ಈ ಮೋಟಾರು ವಾಹನಗಳ ಮೇಲೆ ತೆರಿಗೆ ವಿಧಿಸುವ ಮಸೂದೆ ಈ ಸಭೆಯ ಮುಂದೆ ಬಂದಾಗ ಇದರ ವಿಚಾರವಾಗಿ ಬಹಳ ದೂರ ಮಾತನಾಡಿ ಸಮನ್ವಯದ ಹೆಸರಿನಲ್ಲಿ ಈ ಮಸೂದೆ ತಂದಿದ್ದರೂ ಸರ್ಕಾರ ಪ್ರೋಗ್ರೆಸಿವ್ ವ್ಯೂಸ್ ಇಟ್ಟುಕೊಂಡಿದೆಯೇ, ಜನಗಳಿಗೆ ಕೊಟ್ಟ ಮಾತನ್ನು ಸರ್ಕಾರ ಉಳಿಸಿಕೊಳ್ಳುವ ಮಾರ್ಗದಲ್ಲಿ ಹೆಜ್ಜೆ ಇಡುತ್ತಿದೆಯೆ ಎಂಬುದನ್ನು ಸ್ಪಷ್ಟಪಡಿಸಿದ್ದೇವೆ. ಹಿಂದೆ ಈ ಮಸೂದೆಯ ಮೇಲೆ ಬಹಳ ಬಿಸಿಬಿಸಿ ಚರ್ಚೆ ನಡೆಯಿತು. ಸರ್ಕಾರ ನಡೆಸತಕ್ಕ ಪಕ್ಷದಲ್ಲಿರುವ ಸದಸ್ಯರೇ ಈ ಮಸೂದೆ ಹಾಗಿಲ್ಲಿ, ಹೀಗಿಲ್ಲ ಎಂದು ತಮ್ಮ ಅನುಕೂಲತೆಯ ದೃಷ್ಟಿಯಿಂದ ಮಾತನಾಡಿ ವಿರೋಧಿಸಿದರು. ಸರ್ಕಾರದ ಈ ಹೆಜ್ಜೆ ನಿಜವಾಗಿಯೂ ಬಹಳ ಧೈರ್ಯದಿಂದ ಇಟ್ಟಿರುವುದಾಗಿದೆ, ಮುಂದಿಟ್ಟಿದ್ದನ್ನು ಹಿಂದಕ್ಕೆ ತೆಗೆದುಕೊಳ್ಳಬಾರದೆಂದು ಮನಸ್ಸು ಮಾಡಿದ್ದಾರೆ, ಈ ಮಸೂದೆ ಸ್ವಲ್ಪ ಪ್ರೋಗ್ರೆಸಿವ್ ಆಗಿರಬೇಕಾಗಿತ್ತು, ಆದರೆ ಸರ್ಕಾರ ಮನಸ್ಸುಮಾಡಲಿಲ್ಲ, ತಮ್ಮವರನ್ನು ಸಮಾಧಾನ ಮಾಡುವುದಕ್ಕೆ ಈ ಮಸೂದೆ ತಂದಿದ್ದಾರೆ ಎಂದು ಆ ದಿವಸ ಟೀಕೆ ಮಾಡಿದ್ದೇವೆ.

ಶ್ರೀ ಸಿ. ಎಂ. ಪೂಣಚ್ಚ.—ಆ ಪ್ರಸ್ತಾಪ ಮಾಡುವುದಕ್ಕೆ ಮುಂಚೆ ಅವರಿಗೆ ಅರಿಕೆ ಮಾಡುವುದೇನೆಂದರೆ ಈ ಸಭೆಯಲ್ಲಿರುವ ಎದುರು ಪಕ್ಷದ ಸದಸ್ಯರನೇಕರು ಈ ಮಸೂದೆ ತಂದಿರುವುದ ಸರಿಯಾಗಿದೆ, ಇನ್ನೂ ಒಂದು ಹೆಜ್ಜೆ ಮುಂದೆ ಹೋಗಬೇಕು ಎಂದು ಹೇಳಿದ್ದಾರೆ. ಬಹಳ ಹೊರೆ ಈ ಮಸೂದೆ ಹೊರಿಸುತ್ತದೆಂದು ಟೀಕೆ ಮಾಡಿರುವುದು ನಿಜ. ಆದರೂ ಅನೇಕರು ದರ ಏರಿಸಿ ಪ್ರಗತಿಪರವಾಗಿ ಮಾಡಬೇಕೆಂದು ಅಭಿಪ್ರಾಯಪಟ್ಟಿ

(ಶ್ರೀ ಸಿ. ಎಂ. ಪೂಣಚ್ಚ)

ದ್ದಾರೆ, ಅಲ್ಲದೆ ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಮುಂಚೆ ಭಾಷಣಮಾಡಿದ ಶ್ರೀಮಾನ್ ಶಂಕರಪ್ಪನವರೂ ಕೂಡ ಹೇಳಿದ ಅಭಿಪ್ರಾಯಕ್ಕೆ ವ್ಯತಿರಿಕ್ತವಾಗಿ ಮಾತನಾಡುವಂತೆ ಕಾಣುತ್ತಿದೆ.

Sri C. K. RAJAIAH SETTY (Chiknayakanahalli).—Shall I draw your kind attention to my speech the other day where I have welcomed the Bill proposing higher rates ?

Sri C. M. POONACHA.—If you will kindly refer to the speech of your friend by your side you will know what contradictions there were between the two view points.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ತಮ್ಮ ಪ್ರೊಸಿಡಿಂಗ್ಸ್ ನೋಡಿದರೆ ಗೃಹಸಚಿವರಿಗೆ ನಾವೇನು ಹಿಂದೆ ಹೇಳಿದ್ದೇವೆಂಬುದು ವೇದ್ಯವಾಗುತ್ತದೆ. ಈ ದೇಶದಲ್ಲಿ ವಾಹನ ಸಂಚಾರ ಎಷ್ಟರಮಟ್ಟಿಗೆ ನಡೆಯುತ್ತಿದೆ, ಅದರಿಂದ ಜನರಿಗೆಷ್ಟು ಉಪಯೋಗವಾಗಿದೆ ಎಂದು ಚೆನ್ನಾಗಿ ಹೇಳಿದ್ದೇವೆ. ತೆರಿಗೆ ಹಾಕುವ ವಿಷಯದಲ್ಲಿ ಹಿಂದಕ್ಕೆ ಹೆಜ್ಜೆ ಹಾಕಿಲ್ಲ.

4 P. M.

ಇದನ್ನು ಮಾನ್ಯ ಮಂತ್ರಿಗಳು ಸ್ವಲ್ಪ ಗಮನದಲ್ಲಿಡಬೇಕು. ಈ ಸಂದರ್ಭದಲ್ಲಿ ವ್ಯವಹಾರ ಮಾಡುವ ಜನರು ಮಾಡತಕ್ಕ ಕಾರ್ಯದಲ್ಲೆ ಹಿಂದೆ ಹೋಗಿದ್ದಾರೆ ಮತ್ತು ಅವರ ಇಫಿಷಿಯನ್ಸಿಯನ್ನು ತೋರಿಸುತ್ತಿದ್ದಾರೆ, ಇದರಿಂದ ಸರಕಾರದಲ್ಲಿ ದಕ್ಷತೆ ಕಡಮೆಯಾಗುತ್ತಿದೆ ಎಂದು ಅವರೇ ಹೇಳಿದ್ದಾರೆ. ಮತ್ತು ಈಗ ಈ ಬಿಲ್ಲಿಗೆ ಮುಂದೆ ಅವರ ಪಕ್ಷದವರಿಂದಲೇ ಅಮೆಂಡುಮೆಂಟುಗಳೂ ಕೂಡ ಬಂದಿವೆ. ಅದನ್ನು ಮಂತ್ರಿಗಳು ಒಪ್ಪಬೇಕಾಗುತ್ತದೆ. ಹೀಗೆ ಮಾಡುವುದು ಪ್ರೊಗ್ರೆಸಿವ್ ಎಂದು ತಾವು ಒಪ್ಪಿಕೊಳ್ಳುತ್ತೀರಾ ಎಂಬುದನ್ನು ಅವರೇ ಹೇಳಲಿ.

ಈ ಬಿಲ್ಲನ್ನು ವಿಮರ್ಶೆಮಾಡಲು ಸೆಲೆಕ್ಟ್‌ಸಮಿತಿಯಲ್ಲಿ ಇಂಟರೆಸ್ಟೆಡ್ ಪಾರ್ಟೀಸ್ ಇರದೆ ಒಂದು ರೀತಿ unbiassed ಆಗಿ ಈ ಮಸೂದೆ ವಿಮರ್ಶೆಯಾಗಿ ಬರಬೇಕೆಂದು ಅದನ್ನು ಸೆಲೆಕ್ಟು ಕಮಿಟಿಗೆ ಕಳುಹಿಸಿತ್ತು. ಏಕೆಂದರೆ ವೆಸ್ಟೆಡ್ ಇಂಟರೆಸ್ಟು ಇರುವವರು ಆ ಸಮಿತಿಯಲ್ಲಿದ್ದರೆ ಈ ಮಸೂದೆಯ ಉದ್ದೇಶಗಳು ವಾಟರ್ ಡೌನು ಆಗುತ್ತದೆ ಎಂದು ಹೇಳಿದ್ದೆವು. ಹಾಗೆ ಈ ಬಿಲ್ಲನ್ನು ಬಹಳ ದೀರ್ಘವಾಗಿ ಯೋಚನೆಮಾಡಿ,ಇದರಲ್ಲೆ ಏನಾದರೂ ಜನತೆಗೆ ತೊಂದರೆಯಾಗುವುದಿದ್ದರೆ ಅದನ್ನು ಸರಿಪಡಿಸಿ ನಮ್ಮ ಮುಂದೆ ಸೆಲೆಕ್ಟ್ ಸಮಿತಿಯವರು ತರುತ್ತಾರೆಂದು ಇದ್ದರೆ ಆ ರೀತಿಯಾದ ರಿಪೋರ್ಟು ನಮ್ಮ ಮುಂದೆ ಬಂದಿಲ್ಲ. ಎಲ್ಲವನ್ನೂ ಪರಿಶೀಲಿಸಿ ನಮ್ಮ ಮುಂದೆ ಬಂದಿದೆಯೆಂದು ಹೇಳಿದರೆ ನಾವು ಒಪ್ಪುವುದಕ್ಕಾಗುವುದಿಲ್ಲ. ಇದನ್ನು ಹೀಗೆಯೇ ನಾವು ಒಪ್ಪುವುದಕ್ಕಾಗುವುದಿಲ್ಲ. ಈ ಸೆಲೆಕ್ಟು ಕಮಿಟಿಯವರು ಮೊದಲಿದ್ದ ಕರಡು ಮಸೂದೆಯನ್ನು ಸರಿಯಾಗಿ ಪರಿವರ್ತನೆ ಮಾಡಿ ಇಲ್ಲಿಗೆ ಕಳುಹಿಸಿಲ್ಲವೆಂದು ನನ್ನ ಅಭಿಪ್ರಾಯ. ಅದು ಹೇಗಾದರೂ ಇರಲಿ. ಈ ವಿಚಾರಕ್ಕೆ ನಾನು ಹೋಗುವುದಿಲ್ಲ. ಆದರೆ ಈ ಸಭೆಯಲ್ಲಿ ಹಿಂದೆ ನಾವು ಹೇಳಿದ್ದ ಒಂದು ವಿಚಾರದ ಬಗ್ಗೆ ಈ ಸೆಲೆಕ್ಟು ಕಮಿಟಿಯವರು ಗಮನದಲ್ಲಿಟ್ಟುಕೊಂಡು ಪರಿಶೀಲಿಸಿದ್ದಾರೆಯೇ ಎಂಬುದರ ಬಗ್ಗೆ ಮಾನ್ಯ ಮಂತ್ರಿಗಳ ಗಮನವನ್ನು ಆ ಕಡೆಗೆ ಎಳೆಯುತ್ತಿದ್ದೇನೆ. ಇಷ್ಟು ದೊಡ್ಡ ಉದ್ಯಮವನ್ನು ನಡೆಸತಕ್ಕ ಜನ ಬಳ್ಳಾರಿಯಿಂದ ಬೆಂಗಳೂರಿಗೆ ಬಂದು ಪರ್ಮಿಟ್ಟನ್ನ ತೆಗೆದುಕೊಂಡು ಇಲ್ಲಿಯೇ ಹಣವನ್ನು ಕಟ್ಟಿ ಹೋಗುವುದು ಸರಿಯಲ್ಲವೆಂದು ನಾವು ಹೇಳಿದ್ದೆವು. ಈ ಹಣವನ್ನು ಕಟ್ಟಲು ಅವರ ಮನೆ ಬಾಗಿಲಿನ ಬಳಿಯೇ ಕಟ್ಟುವುದಕ್ಕೆ ಅವಕಾಶ ಮಾಡಬೇಕೆಂದು ನಾವು ಹೇಳಿದ್ದರೂ ಸಹ ಈಗ ಸೆಲೆಕ್ಟು ಕಮಿಟಿಯಿಂದ ಬಂದಿರುವ ರಿಪೋರ್ಟನ್ನು ನೋಡಿದರೆ ಏನೂ ಪರಿಹಾರ ಕೊಟ್ಟಿಲ್ಲ. ಪರ್ಮಿಟ್ಟುಗಳನ್ನು ತೆಗೆದುಕೊಂಡು ಹಣವನ್ನು ಅಲ್ಲಿಯ ತಾಲ್ಲೂಕು ಟ್ರೆಜರಿಗೋ ಅಥವಾ ಡಿಸ್ಟ್ರಿಕ್ಟು ಟ್ರೆಜರಿಗೋ ಕಟ್ಟಲು ಒಂದು ಅವಕಾಶವನ್ನು ಈ ಸೆಲೆಕ್ಟು ಕಮಿಟಿಯ ರಿಪೋರ್ಟಿನಲ್ಲಿ ಕೊಟ್ಟಿಲ್ಲ. ಇದೇ ವಿಷಯವನ್ನು ಮಾನ್ಯ ಮಂತ್ರಿಗಳು ಚಿತ್ರದುರ್ಗಕ್ಕೆ ಹೋಗಿದ್ದಾಗ ಅಲ್ಲಿಯ ಕಾಂಗ್ರೆಸ್ಸಿನ ಸಮಿತಿಯ ಸಭೆಯಲ್ಲಿ ಮಾತನಾಡುತ್ತ ಇದಕ್ಕೆ ಆಯಾ ಸ್ಥಳದಲ್ಲಿಯೇ ಹಣವನ್ನು ಕಟ್ಟಲು ಅವಕಾಶ ಮಾಡಿಕೊಡುತ್ತೇವೆಂದು ಹೇಳಿದ್ದರು. ಅದರಂತೆ ಈ ಸೆಲೆಕ್ಟು ಕಮಿಟಿ ರಿಪೋರ್ಟಿನಲ್ಲಿ ಒಳಗೊಂಡಿದೆಯೇ ಎಂದು ನೋಡಿದರೆ ಇದರಲ್ಲಿ ಅದು ಎಲ್ಲಿಯೂ ಕಾಣಬರುವುದಿಲ್ಲ. ಇದರಲ್ಲಿ ಏನಿದೆ ಎಂದರೆ, ಕ್ಲಾಸು ಮೂರು, ಅನಂತರ ಕ್ಲಾಸು 16 ಮತ್ತು ಷೆಡ್ಯೂಲು ಮಾತ್ರ ಮಾರ್ಪಾಟುಮಾಡಿ ಎಲ್ಲ ವಿಷಯಗಳನ್ನು ಪರಿವರ್ತನಗೊಳಿಸಿದ್ದೇವೆ ಎಂದು ಹೇಳಿರುವುದರಲ್ಲಿ ಅರ್ಥವಿಲ್ಲ. ಇದಕ್ಕಾಗಿ ಎರಡುಸಾರಿ ಟಿ. ಎ. ಮುಂತಾದುವುಗಳನ್ನು ಖರ್ಚು ಮಾಡಿಸಿ ಈ ರೀತಿಯಾದ ರಿಪೋರ್ಟನ್ನು ಕಳುಹಿಸುವುದಕ್ಕೆ ಮೊದಲಿದ್ದ ಬಿಲ್ಲನ್ನು ಹಾಗೆಯೇ ಪಾಸು ಮಾಡಿದ್ದರೆ ಏನು ತೊಂದರೆಯಾಗುತ್ತಿತ್ತು ? ಇನ್ನು ಈ ಸೆಲೆಕ್ಟು ಕಮಿಟಿಯ ರಿಪೋರ್ಟಿನಿಂದ ಜನಗಳಿಗೆ ಎಷ್ಟರ ಮಟ್ಟಿಗೆ ಅನ್ಯಾಯವಾಗಬಹುದು ಎನ್ನುವುದನ್ನು ಕೂಡ ಇದರ ಆಡಳಿತ ನಡೆಸತಕ್ಕವರು ಗಮನಿಸಿಲ್ಲ. ಇವತ್ತು ಸರಕಾರಕ್ಕೆ 1,66,80,000 ರೂಪಾಯಿಗಳು ಆದಾಯ ತರತಕ್ಕಂತಹ ಒಂದು ಡಿಪಾರ್ಟುಮೆಂಟ್ ಇದು. ಇದು ಪ್ರೊಗ್ರೆಸಿವ್ ಆಗಿ ಕೆಲಸಮಾಡುತ್ತಿದೆ ಎಂದು ಹೇಳಿದರೆ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಇಂತಹ ಇನ್ನೂ ಹೆಚ್ಚು ಆದಾಯ ಬರುವ ಜನಗಳ ಮೇಲೆ ಟ್ಯಾಕ್ಸನ್ನು ಹಾಕಬಾರದೆಂದು ಹೇಳುವುದು ಸರಿಯಲ್ಲ. ಇವು ಯಾವುದನ್ನೂ ಸರಿಯಾಗಿ ಆಲೋಚನೆಮಾಡಿಲ್ಲ.

ಸ್ವಾಮೀ, ಇವತ್ತು ಸರಕಾರದವರು ಡೆಫಿಸಿಟ್ಟು ಬಡ್ಜೆಟ್ಟನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಡೆಫಿಸಿಟ್ಟು ಬಡ್ಜೆಟ್ಟನ್ನು ತುಂಬುವುದಕ್ಕಾಗಿ ಅನೇಕ ರೀತಿಯಲ್ಲಿ ಟ್ಯಾಕ್ಸನ್ನು ಹಾಕಬೇಕಾಗಿದೆ. ಇವತ್ತೂ ಸಹ ಎಷ್ಟೋ ಮೋಟಾರು ವೆಹಿಕಲ್ಲುಗಳು, ಎಷ್ಟೋ ಪ್ರೈವೇಟು ಕಾರುಗಳು ಟ್ಯಾಕ್ಸನ್ನು ಕೊಡದೆ ಓಡಾಡುತ್ತಿವೆ. ಟ್ಯಾಕ್ಸಿಗಳಾಗಿ ಪರಿವರ್ತನೆ ಮಾಡಿರುವ ಸಾವಿರಾರು ವಾಹನಗಳು ಪ್ರೈವೇಟು ಜನರ ಬಳಿ ಇಂದಿಗೂ ಇವೆ. ಇಂತಹುದೊಂದನ್ನೂ ಸರಕಾರದವರು ಗಮನಕ್ಕೆ ತೆಗೆದುಕೊಂಡಿಲ್ಲ. ಇದನ್ನೆಲ್ಲಾ ನೋಡಿಕೊಳ್ಳಲು ಪ್ರತ್ಯೇಕವಾದ ಒಂದು ಡಿಪಾರ್ಟುಮೆಂಟಿದೆ. ಡಿ.ಎಸ್.ಪಿ. ಇದ್ದಾರೆ, ಎ.ಎಸ್.ಪಿ. ಗಳಿದ್ದಾರೆ; ಮತ್ತು ಅವರ ಕೈಕೆಳಗೆ ವ್ಯಾನುಗಳನ್ನು ಕೂಡ ಕೊಟ್ಟಿದ್ದಾರೆ. ಇವರು ಈ ವಿಚಾರದಲ್ಲಿ ಸರಿಯಾಗಿ ನಿಗಾ ತೆಗೆದುಕೊಳ್ಳುತ್ತಾ ಇಲ್ಲ. ನಾನು ಆ ರೀತಿ ಎಲ್ಲಿ ನಡೆಯುತ್ತಿವೆ ಎಂಬುದನ್ನು ನನ್ನೊಡನೆ ಬಂದರೆ ತೋರಿಸುತ್ತೇನೆ. ಇಲ್ಲೇ ನೂರಾರು ವಾಹನಗಳು ಓಡಾಡುತ್ತಿವೆ. ಪ್ರೈವೇಟು ಜನರೇ

ಪ್ಯಾಸೆಂಜರುಗಳನ್ನು ಕೂಡ ಕರೆದುಕೊಂಡು ಪ್ಲೈ ಮಾಡುತ್ತಿದ್ದಾರೆ ಹೀಗೆಲ್ಲ ಇರುವಾಗ ಇದನ್ನೆಲ್ಲ ಆ ಇಲಾಖೆಯವರು ನೋಡಿದ್ದಾರೆಯೇ? ನಿಜವಾಗಿಯೂ ಈ ಇಲಾಖೆಯ ಆಡಳಿತ ಪ್ರೊಗ್ರೆಸೀವ್ ಆಗಿ ಸಾಗುತ್ತದೆಯೇ ಎಂದು ಕೇಳಬೇಕಾಗಿದೆ? ನಮ್ಮ ಅಧಿಕಾರಿಗಳಲ್ಲಿ ದಕ್ಷತೆಯಿದೆಯೇ?

ಚೇರ್ಮನ್ ಅವರು.—ಯಾವುದಾದರೂ ಸ್ಪೆಸಿಫಿಕ್ ಇನ್ಸ್‌ಟೆನ್ಸ್ ಇದ್ದರೆ ಹೇಳಿ.

ಶ್ರೀ ಸಿ. ಜೆ, ಮುಕ್ಕಣ್ಣಪ್ಪ.—ಸ್ಪೆಸಿಫಿಕ್ ಇನ್ಸ್‌ಟೆನ್ಸ್ ಇದೆ ಸ್ವಾಮೀ, ಬೇಕಾದಷ್ಟು ಇವೆ.

There are thousand instances which I can bring to the notice of the Hon'ble Minister for Road Transport.

ಚೇರ್ಮನ್ ಅವರು.—ಅಂತಹವುಗಳನ್ನು ಇದ್ದರೆ ತಿಳಿಸಬಹುದು.

Sri C. J. MUCKANNAPPA.—It is not my duty. There is an Officer who is paid Rs. 1,400 per month. There is another Officer who is paid Rs. 800 per month. Is it not their duty to go and look into these things?

*Sri A. V. NARASIMHA REDDY (Bangalore South).—Sir, I rise to a point of order. We are now concerned with the discussion of the Mysore Motor Vehicles Taxation Bill, 1957, as reported by the Select Committee. We are not now discussing the administrative nature of the department and its drawbacks. My Hon'ble friend is dilating at great length on the drawbacks of the administration of the department without confining himself to the provisions of the Bill and the rates of taxation proposed to be levied which are relevant for discussion purposes now. Therefore, I want a ruling from the Chair on this point.

Sri B. K. PUTTARAMAIYA (Channapatna).—Before the Chair gives a ruling I want to make one submission on the same point.

Sri K. S. SURYANARAYANA RAO (Mysore City).—On a point of order, Sir.

ಚೇರ್‌ಮನ್ ಅವರು.—ಶ್ರೀ ಪುಟ್ಟರಾಮಯ್ಯನವರು ಮಾತನಾಡಿದ ಮೇಲೆ ನಾನು ಪಾಯಿಂಟು ಆಫ್ ಆರ್ಡರಿನಮೇಲೆ ನನ್ನ ರೂಲಿಂಗ್ ಕೊಡುತ್ತೇನೆ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಶ್ರೀ ಪುಟ್ಟರಾಮಯ್ಯನವರು ಶ್ರೀ ನರಸಿಂಹ ರೆಡ್ಡಿಯವರ ಪಾಯಿಂಟಿನ ಮೇಲೆ ಅರ್ಥ ವಿವರಣೆ ಕೊಡುವುದು ಸರಿಯಲ್ಲ.

Sri B. K. PUTTARAMAIYA.—When there is already a point of order pending before the House how can another point of order be raised by another member? I want to make one suggestion on the point of order raised by the Hon'ble Member Sri Narasimha Reddy.

Sri K. S. SURYANARAYANA RAO.—When a point of order is raised it is for the Chair to give a ruling. It is not for Sri Puttaramaiya to give a ruling in this matter. When Sri Narasimha Reddy has raised his point of order it is for the Speaker to say whether there is a point of order or not. It is not for the Hon'ble Member Sri Puttaramiya or any other member to say whether there is a point of order or not in it.

ಚೇರ್ಮನ್ ಅವರು.—ನಾನು ಈಗಾಗಲೇ ಶ್ರೀ ಪುಟ್ಟರಾಮಯ್ಯನವರಿಗೆ ಮಾತನಾಡಲು ಅನುಮತಿ ಕೊಟ್ಟಿದ್ದೇನೆ. ಅವರು ಮಾತನಾಡಿದ ನಂತರ ನಾನು ನನ್ನ ರೂಲಿಂಗನ್ನು ಕೊಡುತ್ತೇನೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಅಧ್ಯಕ್ಷರು ಮಾತನಾಡಲು ನನಗೆ ಅವಕಾಶಕೊಟ್ಟಮೇಲೆ ಅದರ ಮೇಲೆ ಬೇರೆ ಸದಸ್ಯರು ಪಾಯಿಂಟ್ ಆಫ್ ಆರ್ಡರ್ ಎತ್ತುವದನ್ನು ನಾನು ಎಲ್ಲಿಯೂ ನೋಡಿಲ್ಲ. Any how let us forget it. ಆಯಾಯ ಕ್ಲಾಜುಗಳಿಗೆ ಸಂಬಂಧಪಟ್ಟ ವಿಷಯವನ್ನು ಹೇಳಬೇಕಾಗುತ್ತದೆ ಎಂಬುದೇ ನನ್ನ ಸೂಚನೆಯಾಗಿದೆ.

Sri K. S. SURYANARAYANA RAO.—Can a member make a suggestion on the point of order?

ಶ್ರೀ ಎನ್. ಜಿ. ನರಸಿಂಹೇಗೌಡ (ಶ್ರವಣಬೆಳಗೊಳ).—ಸ್ವಾಮಿ, ಇದಕ್ಕೆ ಪ್ರಿವಿಲೆಜ್ ಮೋಷನ್ ಮಂಡಿಸಬೇಕಾಗುತ್ತದೆ. ಅಧ್ಯಕ್ಷರು ರೂಲಿಂಗ್ ಕೊಟ್ಟಮೇಲೆ ಬೇರೆ ಸದಸ್ಯರು ಮಾತನಾಡಕೂಡದು.

(*Many Hon'ble Members rose*)

ಚೇರ್‌ಮನ್ ಅವರು.—ಎಲ್ಲರೂ ಮೊದಲು ದಯವಿಟ್ಟು ಕುಳಿತುಕೊಳ್ಳಬೇಕು. ನಾನು ಒಬ್ಬರಿಗೆ ಮಾತನಾಡುವದಕ್ಕೆ ಅವಕಾಶಕೊಟ್ಟಮೇಲೆ ಅವರು ಮಾತನಾಡುತ್ತಿರುವಾಗ ಮತ್ತೊಬ್ಬ ಸದಸ್ಯರು ಎದ್ದುನಿಂತು ಮಾತನಾಡಿದರೆ ಸಭೆಯ ಕಾರ್ಯಕಲಾಪ ನಡೆಯುವುದು ಹೇಗೆ?

Sri M. C. NARASIMHAN (Kolar Gold Field).—May I submit to the Chair that all this confusion has arisen because Sri Suryanarayana Rao persisted in discussing the capacity of the Chair to permit a particular member to speak? That is how it has arisen.

ಚೇರ್‌ಮನ್ ಅವರು.—ನಾನು ಇನ್ನೂ ರೂಲಿಂಗ್ ಕೊಟ್ಟಿಲ್ಲ. ಅವರು ಮಾತನಾಡಲು ಅವಕಾಶವನ್ನು ಕೊಟ್ಟಿದ್ದೇನೆ. ಅವರು ಮಾತನಾಡುವುದು ಮುಗಿದ ನಂತರ ನಾನು ಹೇಳುತ್ತೇನೆ, ಪಾಯಿಂಟ್ ಆಫ್ ಆರ್ಡರದ ಬಗ್ಗೆ ಕ್ಲಾರಿಫಿಕೇಷನ್ ಮಾಡುತ್ತಿರುವುದನ್ನು ಕೇಳುತ್ತಿದ್ದೇನೆ.

Sri K. S. SURYANARAYANA RAO.—It is not given to the Hon'ble Member to cast a reflection or to make a comment. What I suggested was it was

(SRI K. S. SURYANARAYANA RAO) not open to Sri Puttaramiya or myself to make any suggestions when a point of order was raised.

ಚೇರ್‌ಮನ್ ಅವರು.—ನಾನು ಒಂದು ಸಲ ಶ್ರೀ ಪುಟ್ಟರಾಮಯ್ಯನವರಿಗೆ ಮಾತನಾಡಲು ಅವಕಾಶ ಕೊಟ್ಟಿದ್ದೇನೆ. ಅದು ಆದನಂತರ ನನ್ನ ರೂಲಿಂಗ್ ಕೊಡುತ್ತೇನೆ. ದಯವಿಟ್ಟು ಸದಸ್ಯರು ಮೇಲಿಂದ ಮೇಲೆ ಸಭೆಯ ಕಾರ್ಯಕಲಾಪಗಳಿಗೆ ಆತಂಕವನ್ನು ತರಬಾರದೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ನಮ್ಮ ವಿರೋಧ ಪಕ್ಷದ ನಾಯಕರ ಸಲಹೆ ಕೊಡುತ್ತಾರೆ.

Sri K. KENCHAPPA (Hiriyur).—I am raising a point of order.

ಚೇರ್‌ಮನ್ ಅವರು.—ನಾನು ರೂಲಿಂಗ್ ಕೊಟ್ಟಿಲ್ಲ ಆದ ಕಾರಣ ಅದು ಆದನಂತರ ನೀವು ಹೇಳಬಹುದು.

Sri K. KENCHAPPA.—I must be given a chance to say what I have got to say before the Chair can decide whether there is a point of order or not.

ಚೇರ್‌ಮನ್ ಅವರು.—ಪಾಯಿಂಟ್ ಆಫ್ ಆರ್ಡರ್ ಏನೆಂಬುದನ್ನು ತಾವು ಹೇಳಿ.

ಶ್ರೀ ಕೆ. ಕೆಂಚಪ್ಪ.—ಒಂದು ಸರ್ತಿ ರೂಲಿಂಗ್ ಕೊಟ್ಟ ಮೇಲೆ, ಮತ್ತೆ ರೂಲಿಂಗಿಗೆ ವಿರೋಧವಾಗಿ ಹೇಳಬಾರದು.

ಚೇರ್‌ಮನ್ ಅವರು.—ರೂಲಿಂಗ್ ಕೊಟ್ಟಿಲ್ಲ.

ಶ್ರೀ ಕೆ. ಕೆಂಚಪ್ಪ.—ಪಾಯಿಂಟ್ ಆಫ್ ಆರ್ಡರಿಗೆ! ರೂಲಿಂಗ್ ಕೊಟ್ಟಿದ್ದೀರಿ. ಶ್ರೀ ಸೂರ್ಯನಾರಾಯಣ ರಾಯರಿಗೆ ಏಳ ಬೇಡಿ ಎಂದು ಹೇಳಿದ್ದೀರಿ.

ಚೇರ್‌ಮನ್ ಅವರು.—ಶ್ರೀ ಕೆ. ಕೆಂಚಪ್ಪನವರು ಕೇಳಬೇಕು. ನಾನು ಇದುವರೆಗೆ ರೂಲಿಂಗ್ ಕೊಟ್ಟಿಲ್ಲ. ಅವರಿಗೆ ಮಾತನಾಡಲು ಅವಕಾಶ ಕೊಟ್ಟಿದ್ದೇನೆ. ಅವರು ಮಾತನಾಡಿದ ನಂತರ ರೂಲಿಂಗ್ ಕೊಡುತ್ತೇನೆಂದು ಹೇಳಿದ್ದೇನೆ. ತಾವು ತಪ್ಪು ಹೇಳುತ್ತೀರಿ.

ಶ್ರೀ ಕೆ. ಕೆಂಚಪ್ಪ.—ತಪ್ಪು ಹೇಳಿದ್ದರೆ, ನಾನು ಮಾತು ಮುಗಿಸಿದ ಮೇಲೆ ಹೇಳಿ. ಅವರೂ ನಿಂತಿದ್ದಾರೆ, ನೀವು ನಿಂತಿದ್ದೀರಿ, ಆದ್ದರಿಂದ ಶ್ರೀ ಸೂರ್ಯನಾರಾಯಣ ರಾಯರನ್ನು ದಯವಿಟ್ಟು ಕುಳಿತುಕೊಳ್ಳಿ ಎಂದು ಹೇಳಿದಿರಿ. ತಾವು ಒಂದು ಸಾರಿ ಹಾಗೆ ರೂಲಿಂಗ್ ಕೊಟ್ಟಮೇಲೆ ಸದಸ್ಯರು ಕುಳಿತುಕೊಳ್ಳಬೇಕಾದುದು ಅವರ ಕರ್ತವ್ಯ. When once the Chair gives a ruling to the effect that the Hon'ble Member must sit down, because it had given a chance to Sri Puttaramiya to speak, it amounts to a ruling and the member should obey it.

Mr. CHAIRMAN.—I have not given a ruling.

ಶ್ರೀ ಕೆ. ಕೆಂಚಪ್ಪ.—ಅದು ಏನೇ ಇರಲಿ, ಇದು ರೂಲಿಂಗ್ ಆಗುತ್ತದೆ. ಅಧ್ಯಕ್ಷರು ಮೂರು ಸಾರಿ ಕುಳಿತುಕೊಳ್ಳಲಿಕ್ಕೆ ಹೇಳಿದರೂ ಅವರು ಎದ್ದು ನಿಲ್ಲುತ್ತಿದ್ದರು. ನಾವೆಲ್ಲಾ ಇಷ್ಟು ಜನ ಇಲ್ಲಿ ಕಾಲ ಕಳೆಯುವದಕ್ಕೆ ಬಂದಿಲ್ಲ. Rules of Procedure and Conduct, Article 161ದಲ್ಲಿ ಹೀಗೆ ಹೇಳಿದೆ :

"The Speaker may, if he deems it necessary, name a member who disregards the authority of the Chair or abuses the rules of the Assembly by persistently and wilfully obstructing the business thereof."

ಅದಕ್ಕೋಸ್ಕರ ಹೀಗೆ ಸದಸ್ಯರು ಎದ್ದು ನಿಂತುಕೊಂಡರೆ, ನಾವು ಇಲ್ಲಿ ಸುಮ್ಮನೆ ಕಾಲ ಕಳೆಯುವುದಕ್ಕೆ ಬಂದಿಲ್ಲ. ಸರಿಯಾದ ರೀತಿಯಲ್ಲಿ ವೇಳೆಯನ್ನು ಉಪಯೋಗಿಸಿಕೊಳ್ಳಬೇಕೆಂದು ಬಂದಿದ್ದೇವೆ. ಈ ರೀತಿ ಮಾಡುವುದರಿಂದ ದೇಶದ ದುಡ್ಡು ವ್ಯರ್ಥವಾಗಿ ಖರ್ಚಾಗುತ್ತದೆ. ಚೇರ್‌ಮನ್ ಅವರ ಅಪ್ಪಣೆಯನ್ನು ಪಾಲಿಸಬೇಕು. When a ruling is given by the Chair, it must be obeyed. Let him be named and if he still persists, let there be an order from the Chair asking him to retire. If that is not done, there shall be no order in the Assembly. That is what I am submitting.

ಚೇರ್‌ಮನ್ ಅವರು.—ಪಾಯಿಂಟ್ ಆಫ್ ಆರ್ಡರಿನ ಮೇಲೆ ನಾನು ರೂಲಿಂಗ್ ಕೊಟ್ಟಿಲ್ಲ ಎಂದು ಮೊದಲು ವಿರೋಧ ಪಕ್ಷದ ನಾಯಕರು ತಿಳಿದುಕೊಳ್ಳಬೇಕು. ಶ್ರೀ ಸೂರ್ಯನಾರಾಯಣರಾವ್ ಅವರು ಪಾಯಿಂಟ್ ಆಫ್ ಆರ್ಡರ್ raise ಮಾಡಿದರು. ಶ್ರೀ ಪುಟ್ಟರಾಮಯ್ಯನವರು ಏನು ಹೇಳುತ್ತಾರೆ ಎಂಬದನ್ನು ಕೇಳಿಕೊಂಡು ನಾನು ರೂಲಿಂಗ್ ಕೊಡುತ್ತೇನೆ. ಅವರಿಗೆ ಮಾತನಾಡುವದಕ್ಕೆ ಅಷ್ಟೇ ಅವಕಾಶ ಕೊಟ್ಟಿದ್ದೇನೆ. ಸಭೆಯ ಕಾರ್ಯಕಲಾಪಗಳು ಸುಸೂತ್ರವಾಗಿ ಸಾಗುವಂತೆ ಅಧ್ಯಕ್ಷರ ಆಜ್ಞೆಗಳನ್ನು ಪಾಲಿಸಬೇಕು. ಆತಂಕಗಳನ್ನು ತಂದೊಡ್ಡಬಾರದು. ಶ್ರೀ ನರಸಿಂಹ ರೆಡ್ಡಿಯವರ ಪಾಯಿಂಟ್ ಆಫ್ ಆರ್ಡರ ಮೇಲೆ ಈಗ ರೂಲಿಂಗ ಕೊಡುತ್ತೇನೆ. There is no point of order. ಶ್ರೀ ಮುಕ್ಕಣ್ಣಪ್ಪನವರು ಹೇಳಿದ್ದು ಸದ್ಯದ ವಿಷಯಕ್ಕೆ ಸಂಬಂಧಪಟ್ಟದ್ದಾಗಿದೆ. ಟ್ಯಾಕ್ಸ್ ಬರುವದರಲ್ಲಿ ಅನ್ಯಾಯ ನಡೆಯುತ್ತಿದೆ ಎಂದು ಅವರು ಹೇಳಿದರು. ಆದ್ದರಿಂದ There is no point of order. ಇನ್ನು ಶ್ರೀ ಮುಕ್ಕಣ್ಣಪ್ಪನವರು ತಮ್ಮ ಭಾಷಣವನ್ನು ಮುಂದುವರಿಸಬೇಕು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಈ ದೇಶದಲ್ಲಿ ಸರಕಾರಕ್ಕೆ ಬರಬೇಕಾದ ಹಣದ ವಿಷಯದಲ್ಲಿ ಜನರು ಎಷ್ಟರ ಮಟ್ಟಿಗೆ ಅನ್ಯಾಯ ಮಾಡುತ್ತಿದ್ದಾರೆ ಎಂಬುದನ್ನು ನಾನು ಹೇಳುತ್ತಿದ್ದೆನು. ತೆರಿಗೆಯ ವಸೂಲಿಯ ವಿಷಯವಾಗಿ ಒಂದು ಡಿಪಾರ್ಟ್‌ಮೆಂಟು ಇದೆ. ಸರಕಾರದಿಂದ ಸಂಬಳ ಪಡೆಯ ತಕ್ಕಂಥ ಅಧಿಕಾರಿಗಳು ಇದ್ದಾರೆ. ಟ್ಯಾಕ್ಸ್ ವಸೂಲಿ ಮಾಡುವುದು, ಲೈಸೆನ್ಸ್ ಕೊಡುವುದು, ಪರ್‌ಮಿಟ್ ಕೊಡುವುದು, ಲೈಸೆನ್ಸ ಸಸ್ಪೆಂಡ್ ಮಾಡುವುದು ಮುಂತಾದ ಕೆಲಸಗಳ ಸಲುವಾಗಿ ಸ್ಟೇಟ್ ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಯಲ್ಲಿ R.T.O. ಇದ್ದಾರೆ. ಇವರೆಲ್ಲರೂ ಕೂಡ ಮೋಟಾರ್ ವೆಹಿಕಲ್ಸ ಟ್ಯಾಗ್ಸೇಷನ್ ಆಕ್ಟ ಕೆಳಗಡೆ ಬರುತ್ತಾರೆ. ಅದಕ್ಕೋಸ್ಕರ ಈ ವಿಚಾರ ಹೇಳುತ್ತಿದ್ದೇನೆ. ಇವೊತ್ತು ಕಲಾಸಿಪಾಳ್ಯಂ ನರಸಿಂಹರಾಜಾ ರೋಡು ಮುಂತಾದ ಸ್ಥಳಗಳಲ್ಲಿ ಪ್ರೈವೇಟ್ ಟಾಕ್ಸಿ ನಿಂತಿರುವುದನ್ನು ನೋಡಬಹುದು.

ಒಬ್ಬ ಸದಸ್ಯರು.—ಪ್ರೈವೇಟ್ ಎಂದರೆ ಏನು ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಂತ ಉಪಯೋಗಕ್ಕೆಂದು ಟಾಕ್ಸ್ ಕೊಟ್ಟು ಮಾಲೀಕರು ತೆಗೆದುಕೊಂಡ ಕಾರುಗಳನ್ನೂ ವ್ಯಾನುಗಳನ್ನೂ ಬಾಡಿಗೆಗೆ

ಕೊಟ್ಟು ವ್ಯಾಪಾರ ಮಾಡುತ್ತಾರೆ. ಅವರು ಮನೆಗೆ ತರಕಾರಿ ತರಲು ಮತ್ತು ಸ್ವಂತ ಉಪಯೋಗಕ್ಕೆ ನೀವು ಪರಿಮಿಟ್ ಕೊಟ್ಟಿರುವುದು. ಆದರೆ, ಅವರು ವ್ಯಾಪಾರ ಮಾಡಿದರೆ ಅಂತಹವರನ್ನು ಹಿಡಿಯುವ ಕರ್ತವ್ಯ ಯಾರದು ? ಈಗ ತುಮಕೂರಿಗೆ ಬನ್ನಿ, ತುಮಕೂರ ಬಸ್ ಸ್ಟ್ಯಾಂಡದಲ್ಲಿ 16 ವ್ಯಾನುಗಳು ಇರುತ್ತವೆ. ಸಿರಾದಿಂದ ತುಮಕೂರು, ತುಮಕೂರಿನಿಂದ ಮಧುಗಿರಿ, ಮಧುಗಿರಿಯಿಂದ ಸಿರಾ ಮತ್ತು ತುಮಕೂರಿನಿಂದ ಬೆಂಗಳೂರು, ಬೆಂಗಳೂರಿನಿಂದ ತುಮಕೂರಿಗೆ ಓಡಾಡುವ ಎಷ್ಟೋ ವೆಹಿಕಲ್ಸ ಇವೆ ಎಂಬುದು ಮಂತ್ರಿಗಳು ಬಂದು ನೋಡಿದರೆ ಗೊತ್ತಾಗುತ್ತದೆ. ಸಂಬಂಧಪಟ್ಟ ಅಧಿಕಾರಿಗಳು ಏನು ಮಾಡುತ್ತಾರೆ ಎಂದು ನಾನು ಕೇಳುತ್ತೇನೆ. ಟ್ಯಾಕ್ಸ್ ಇವೇಡ್ ಮಾಡುವವರನ್ನು, ತಪ್ಪಿಸುವವರನ್ನು, ದೇಶಕ್ಕೆ ಅನ್ಯಾಯ ಮಾಡುವವರನ್ನು ಬಿಟ್ಟು ಬಿಟ್ಟು, ಬಾಟಾ ಮಾರ್ಗದಲ್ಲಿ ಬರುವ ಉತ್ಪತ್ತಿಯನ್ನ ಖೋತಾ ಮಾಡಬೇಕು ಎಂದು ತಂದಿರುವ ಈ ಬಿಲ್ಲನ್ನು ಸಮಾಧಾನದಿಂದ ಒಪ್ಪಿಕೊಳ್ಳಿ ಎಂದು ಹೇಳಿದರೆ ನಾವು ಅದಕ್ಕೆ ಏನು ಹೇಳಬೇಕು ? ಈ ಬಿಲ್ಲಿನಲ್ಲಿ ಅವಶ್ಯವಾಗಿದ್ದ ಪರಿವರ್ತನೆಯನ್ನು ಮಾಡಿಲ್ಲವಾದ್ದರಿಂದ ಇದನ್ನು ಒಪ್ಪಿಕೊಳ್ಳುವುದು ಹೇಗೆ ?

ನಿಮ್ಮ R.T.O. ಸಂತೆ ಮೈದಾನಕ್ಕೆ ಬಂದಿದ್ದಾಗ ಬಸ್ಸಿಗೆ ಪರ್ಮಿಟ್ಟಿಲ್ಲದೆ ತುಮಕೂರಿನಿಂದ ಸಿರಾಕ್ಕೆ ಒಂದು ಬಸ್ ಹೋಗುತ್ತದೆ ಎಂದು ನಾನು ಹೇಳಿದರೆ ಈ ವಿಷಯವನ್ನು ಆಂಟಿಕರಪ್‌ಷನ್ ಇಲಾಖೆಗೆ ಬರೆಯಿರಿ ಎಂದು ಹೇಳಿದರು. ನಾನು ಈ ವಿಚಾರವನ್ನು ಮಂತ್ರಿಗಳ ಗಮನಕ್ಕೆ R.T.O. ನೋಟೀಸಿಗೆ S.T.O. ನೋಟೀಸಿಗೆ ಮತ್ತು ಅದಕ್ಕೆ ಸಂಬಂಧಪಟ್ಟವರ ಗಮನಕ್ಕೆ ತಂದೆನು. ಯಾರೂ ತಪ್ಪಿತಸ್ಥನನ್ನು ಹಿಡಿಯಲಿಲ್ಲ. 12 ಸಾವಿರ ಜನಗಳಿರುವ ಮಧುಗಿರಿಯಲ್ಲಿ ಆರು ಟ್ಯಾಕ್ಸಿಗಳಿವೆ, ಸಿರಾದಲ್ಲಿ ಮೂರಿವೆ, ತುಮಕೂರಿನಲ್ಲಿ ಹದಿನಾರಿವೆ. ಪರ್ಮಿಟ್ಟಿಲ್ಲದೆ ಟ್ಯಾಕ್ಸಿಗಳು ಹೋಗಿ ಬರುತ್ತವೆ. ಅಂತಹವರ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬೇಕು. ನನ್ನ ಡಿಸ್ಟ್ರಿಕ್ಟಿಗೆ ಟೂರ್ ಹಾಕಿಕೊಳ್ಳಬೇಕೆಂದು ಮಾನ್ಯ ಮಂತ್ರಿಗಳನ್ನು ಬಹಳ ವಿನಯದಿಂದ ಕೇಳಿಕೊಳ್ಳುತ್ತೇನೆ. ಅಲ್ಲಿ ಎಷ್ಟು ಬಸ್ಸುಗಳು ಪರ್ಮಿಟ್ ಇಲ್ಲದೆ ಓಡಾಡುತ್ತಿವೆ ಎಂಬುದನ್ನು ನೋಡಬೇಕು. ಸಾಧಾರಣವಾಗಿ ಈ ಸಭೆಯಲ್ಲಿ ಸದಸ್ಯರಾಗಿರುವವರು ಮತ್ತು ಮಂತ್ರಿಗಳಾಗಿರುವವರು ನನ್ನ ಮಾತಿಗೆ ಬೆಲೆ ಕೊಡಬೇಕು. ಯಾರ ದೃಷ್ಟಿಯಿಂದ ಹೇಳುತ್ತೇನೆಂದರೆ ನಿಮ್ಮ ದೃಷ್ಟಿಯಿಂದ ಹೇಳುತ್ತಿದ್ದೇನೆ. ದೇಶದ ಹಣ ಮತ್ತು ದೇಶದ ಕಾನೂನಿನ ವಿಚಾರದಲ್ಲಿ ತುಂಬ ಗೌರವವಿರುವ ಭಾಗದಲ್ಲಿ ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಒಂದು ಸ್ಯಾಂಡಿಟ್ರಿಪ್ಪಿಗೆ ಪರ್ಮಿಟ್ ಕೊಟ್ಟರೆ ಅದನ್ನು ದುರುಪಯೋಗಪಡಿಸುತ್ತಿರುವುದನ್ನು ಯಾರಾದರೂ ಪೋಲೀಸಿನವರಿಗೆ ಹೇಳಿದರೆ ಅವರು ನಮಗೆ ಇದೊಂದೇ ಕೆಲಸವೇ, ಇಮ್ಮಿಡಿಯೇಟ್ ಆಫೀಸರು ಇದ್ದಾರೆ ಅವರಿಗೆ ಹೇಳಿ ಎಂದು ಹೇಳುತ್ತಾರೆ. ಅವರು ಹೇಳುತ್ತಾರೆ "ನೋಡಪ್ಪಾ ನಾವು ಏನು ಮಾಡುವುದು, ಅವರು ಸಾಹುಕಾರರು" ಎಂದು ಹೇಳುತ್ತಾರೆ. ನಾವು ಕಾಗದ ಬರೆದರೆ ಅವರಿಗೂ ನಮಗೂ ಆಗುವುದಿಲ್ಲ. "ಅದಕ್ಕೋಸ್ಕರವೇ ಹಾಗೆ ಕಾಗದ ಬರೆದರು" ಎಂದು ಹೇಳುತ್ತಾರೆ. ನಿಮ್ಮ ಟ್ಯಾಕ್ಸ್ ಕಲೆಕ್ಟಿಂಗ್ ಏಜೆನ್ಸಿಗೆ ನಾನು ಒಂದು ಕಾಗದವನ್ನು ಬರೆದೆ; ಕಾನೂನಿಗೆ ಅಗೌರವ ಮಾಡುತ್ತಿದ್ದಾರೆ ಅಂತಹವರನ್ನು ಹಿಡಿದು ಬಲಿ ಹೊಡೆಯಬೇಕು ಎಂದು ಹೇಳಿದೆ. ಈಗ ನೀವು ಇದರಿಂದ ಒಂದು ಕೋಟಿ ರೂಪಾಯಿಗಳನ್ನು ನಿರೀಕ್ಷಣೆ ಮಾಡುತ್ತಿದ್ದೀರಿ. ನಾವು ಸರಿಯಾದ ಕಾರ್ಯಕ್ರಮ ತೆಗೆದುಕೊಂಡರೆ ಸರ್ಕಾರಕ್ಕೆ ಒಂದು ಕೋಟಿ 60 ಲಕ್ಷ ರೂಪಾಯಿಗಳ ಉತ್ಪತ್ತಿಯಾಗುತ್ತದೆ ಎಂದರೆ 50-60 ಲಕ್ಷ ರೂಪಾಯಿಗಳು ಹೆಚ್ಚಿಗೆ ಸರ್ಕಾರೀ ಖಜಾನೆಗೆ ದುಡ್ಡು ಬರುತ್ತದೆ. ನಾನು ಈ ದೃಷ್ಟಿಯಿಂದ ಹೇಳಿದರೆ ಸುಮ್ಮನೆ ಪಾಯಿಂಟ್ ಆಫ್ ಆರ್ಡರನ್ನು ರೈಸ್ ಮಾಡಿ ನನ್ನ ಕಾಲವನ್ನು ಕಳೆಯುತ್ತಾರೆ. ಈಗ ಲಾರಿಗಳಲ್ಲಿ ಸಂತೆಗೆ ಜನರನ್ನು ತುಂಬಿಕೊಂಡು ಹೋಗುತ್ತಿದ್ದಾರೆ. ಇದನ್ನು ನೋಡಿ ನಿಮ್ಮವರು ಏನು ಮಾಡುತ್ತಿದ್ದಾರೆ ? ಯಾವ ರೂಟಿನಲ್ಲಿ ಓವರ್ ಲೋಡ್ ಇದೆಯೋ ಯಾವ ರೂಟಿನಲ್ಲಿ ಬಸ್ಸುಗಳು ಪರ್ಮಿಟ್ ಇಲ್ಲದೆ ಓಡಾಡುತ್ತಿವೆಯೋ ಅಂತಹ ರೂಟುಗಳಲ್ಲಿ ನಿಮ್ಮ ಅಧಿಕಾರಿಗಳು ಹೋಗುವುದೇ ಇಲ್ಲ. I swear before God that they have not entered into those routes. ಅವರೆಲ್ಲರೂ ಅಭಿಮಾನಕ್ಕೊಳಗಾಗಿದ್ದಾರೆ. ಉದಾಹರಣೆಗೆ ಹೇಳುವುದಾದರೆ, ಶಿರಾದಿಂದ ಪಾವಗಡ ಹೊಸಕೋಟೆಗೆ ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ಪರ್ಮಿಟ್ ಇಲ್ಲದೆಯೇ ಓಡಾಡುತ್ತಿರುತ್ತವೆ. 60 ಮೈಲಿ ಓಡಾಡುತ್ತಿರುವ ಬಸ್ಸುಗಳ ತಂಟೆಗೆ ಅವರು ಹೋಗುವುದೇ ಇಲ್ಲ. ಪರ್ಮಿಟ್ ಇಲ್ಲದೆಯೇ ಓಡಾಡುತ್ತಿರುತ್ತವೆ. ಬೆಳಿಗ್ಗೆ ಆದರೆ ಅವನ್ನು ಬಿಟ್ಟರೆ ಗತಿಯಿಲ್ಲ. ಸರ್ಕಾರದವರು ವೆಹಿಕಲ್ ನಡೆಸಿದಾಗ ಮಂತ್ರಿಗಳ ಹತ್ತಿರ ಇನ್‌ಫ್ಲುಯನ್ಸ್ ಉಪಯೋಗಿಸಿ ಆರು ತಿಂಗಳ ಕಾಲ ನಡೆಯುವುದಕ್ಕೆ ಬಿಡದೆ ವಜಾ ಆಯಿತು. ಇನ್ನೊಂದು ವಿಷಯ. ಬೆಂಗಳೂರು ಸಿಟಿಯಲ್ಲಿ under the very nose of the Government ಅನ್ಯಾಯ ನಡೆಯುತ್ತಿದೆ ಸಿಡ್ನಿ ರೋಡಿನಿಂದ ಒಂದು ಟ್ಯಾಕ್ಸಿ ಬೇಕೆಂದು ಅಸೆಂಬ್ಲಿ ಮೆಂಬರುಗಳಾದ ನಾನು ಮತ್ತು ಶ್ರೀ ವೆಂಕಟೇಗೌಡರು ಹೇಳಿ ಕಳುಹಿಸಿದರೆ ಸಿಡ್ನಿ ರೋಡಿನಿಂದ ಓಲ್ಡ್ ಪಬ್ಲಿಕ್ ಆಫೀಸಿಗೆ ಬರಲು ಮೀಟರ್ ಎರಡು ರೂಪಾಯಿಗಳನ್ನು ತೋರಿಸಿತ್ತು. ಅದಕ್ಕೆ ಏನು ಕಾರಣ ? ನಾವು ಯಾರಿಗೆ ಹೇಳೋಣ ? ಯಾವ ಅಧಿಕಾರಿಗಳನ್ನು ಆ ಸ್ಥಳಗಳಲ್ಲಿಡೋಣ ? ವಾಹನ ಸಂಚಾರ ಅತ್ಯಗತ್ಯ. ಸರ್ಕಾರಕ್ಕೆ ಇದರಿಂದ ಬರುವ ಹಣವೆಲ್ಲವೂ ಬಿದ್ದು ಹೋಗುತ್ತದೆ. ತಮ್ಮ ಕಾನೂನು ಕಟ್ಟಳೆಗಳಿಗೆ ಗೌರವವನ್ನು ಕೊಡದೇ ಇರುವ ಜನ ಇದ್ದಾರೆ. ಅದಕ್ಕೋಸ್ಕರ ಅವರ ಮೇಲೆ ಸರಿಯಾದ ಬಿಗಿ ಇಟ್ಟುಕೊಳ್ಳಬೇಕು. ಯಾವುದಾದರೂ ಕಲೆಕ್ಟಿಂಗ್ ಏಜೆನ್ಸಿ ಇಟ್ಟು ಆಯಾ ಸ್ಥಳಗಳಲ್ಲಿಯೇ ಹಣ ಕಟ್ಟುವುದಕ್ಕೆ ಅವಕಾಶ ಮಾಡಿಕೊಡಬೇಕು. ಷೆಡ್ಯೂಲಿನಲ್ಲಿ 60 ಮೈಲಿಗೆ ಕನ್‌ಸೆಷನ್ ತೋರಿಸಿದ್ದಾರೆ. ಆದರೆ ಒಂದು ಆಣೆಯಿಂದ ಒಂದು ಆಣೆ 3 ಕಾಸಿನ ವರೆಗೂ ತೆಗೆದುಕೊಳ್ಳುತ್ತಿದ್ದಾರೆ. ಅಂತಹವರ ಮೇಲೆ ಕ್ರಮವನ್ನು ಯಾರೂ ತೆಗೆದುಕೊಳ್ಳುತ್ತಿಲ್ಲ ? ಸರ್ಕಾರ ನಾಷನಲೈಸ್ ಮಾಡಿರುವ ರೂಟಿನಲ್ಲಿ ಪ್ರೈವೇಟು ಬಸ್ಸುಗಳಿಗೆ ಐದು ಮೈಲಿಯೊಳಗೆ ಓಡಾಡುವ ಪರ್ಮಿಟ್ ಕೊಡಕೂಡದು. ಸರ್ಕಾರದ ಕಾನೂನುಗಳನ್ನು ಅಗೌರವ ಮಾಡುವ ಗಾಡಿಗಳಲ್ಲಿ ಬರುವವರಿಗೆ ಕಷ್ಟವಾಗುತ್ತದೆ. ಈ ವಿಷಯವನ್ನು ಪ್ರೈವೇಟಾಗಿ ತಮ್ಮ ನೋಟೀಸಿಗೆ ತರುತ್ತೇನೆ. ಒಂದು ಕಣ್ಣಿಗೆ ಬೆಣ್ಣೆ, ಒಂದು ಕಣ್ಣಿಗೆ ಸುಣ್ಣ ಎನ್ನುವ ಪಕ್ಷಪಾತ ಮನೋವೃತ್ತಿ ಹೋಯಿತು. ನಿಮಗೆ ಕೀರ್ತಿ ಬರಬೇಕಾದರೆ ಹಣ ಬರಬೇಕಾದರೆ ಇನ್ನೊಂದು ಏಜೆನ್ಸಿಯನ್ನು ಕ್ರಿಯೇಟ್ ಮಾಡಿ. ಅಲ್ಲಿ ಕೆಲಸಮಾಡುವವರಿಗೆ 200 ರೂಪಾಯಿಗಳಂತೆ ಸಂಬಳ ಕೊಟ್ಟು

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಸರ್ಕಾರಕ್ಕೆ ಬರುವ ಹಣವನ್ನು ವಸೂಲುಮಾಡಿ. ಆರೀತಿ ಡಿಫಿಸಿಟ್ ಆಗಿರುವುದನ್ನು ಫಿಲ್ ಅಪ್ ಮಾಡಿ. ಮಾನ್ಯ ಮಂತ್ರಿಗಳಾದ ಶ್ರೀಮಾನ್ ಪೂಣಚ್ಚ ಅವರು ದೇಶಕ್ಕೆ ಅನುಕೂಲ ಮಾಡಿದ್ದಾರೆ. ಅವರಿಂದ ವಾಹನ ಸಂಚಾರ ಕಂಟ್ರೋಲಿಗೆ ಬಂತು. ನಾನು ಹೇಳಿದ ಹಾಗೆ ಏನೇನು ಸಂಸ್ಕಾರ ಆಗಬೇಕೋ ಅದನ್ನೆಲ್ಲಾ ಮಾಡಬೇಕು. ಆದ್ದರಿಂದ ಈ ವರದಿಗೆ ನನ್ನ ಅಸಮ್ಮತಿಯನ್ನು ಸೂಚಿಸಿ ಈಗ ನಾವು ಹೇಳಿದ ಅಂಶಗಳನ್ನೆಲ್ಲಾ ಈ ಸೆಲೆಕ್ಟ್ ಕಮಿಟಿ ವರದಿಯಲ್ಲಿ ಅಳವಡಿಸಿ ಮುಂದಿನ ಸಾರಿಯಾದರೂ ಸರಿಯಾದ ಮಸೂದೆ ಈ ಸಭೆಯ ಮುಂದೆ ಬರುವ ಹಾಗೆ ಸರ್ಕಾರದವರು ಮಾಡುತ್ತಾರೆಂದು ನಂಬಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಬಿ. ಕೆ. ಪುಟ್ಟರಾಮಯ್ಯ.—ನಾನು ಈ ಮಸೂದೆಯಮೇಲೆ ಮಾತನಾಡಲು ಹೆಚ್ಚು ಕಾಲ ತೆಗೆದುಕೊಳ್ಳುವುದಿಲ್ಲ. ಈ ಮಸೂದೆಯನ್ನು ಹಿಂದೆ ಈ ಅಸೆಂಬ್ಲಿಯಲ್ಲಿ ಮಂಡಿಸಿದಾಗ ನಾನು ಸರ್ಕಾರಕ್ಕೆ ಸಜೆಸ್ಟ್ ಮಾಡಿದ್ದೆ, ಈ ಮಸೂದೆಯನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಬೇಕಾಗಿಲ್ಲ, ಅದು ಇಲ್ಲಿಯೇ ಚರ್ಚೆಯಾಗಲಿ ಎಂದು. ಎಷ್ಟೋ ಅಂಶಗಳನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸದೆ ಚರ್ಚೆಮಾಡಬಹುದಾಗಿತ್ತು. ಯಾವುದನ್ನು ಪಾಸ್ ಮಾಡುವುದಿಲ್ಲವೆಂದು ತಿಳಿದುಕೊಂಡಿದ್ದೆವೋ ಅಂಥಾದ್ದನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಿದರು. ಸೆಲೆಕ್ಟ್ ಕಮಿಟಿಗೆ ಕಳುಹಿಸುವಾಗ ವಿರೋಧ ಪಕ್ಷದವರು ಬೇಡ ಎಂದು ಹೇಳಿದರೂ ಕಳುಹಿಸಿದ್ದಾರೆ. ಆಗಲೇ ನನಗೆ ಸ್ವಲ್ಪ ಅನುಮಾನ ಬಂತು.

ಚೇರ್‌ಮನ್ ಅವರು.— ಸೆಲೆಕ್ಟ್ ಕಮಿಟಿಗೆ ಈ ಮಸೂದೆಯನ್ನು ಕಳುಹಿಸುವಾಗ ವಿರೋಧ ಪಕ್ಷದ ಮಾನ್ಯ ಸದಸ್ಯರೂ ಇದ್ದರು. ಈಗಾಗಲೆ ಅದನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಿ ಅದರ ವರದಿ ಬಂದಾಗಿದೆ. ಆ ವರದಿಯ ಮೇಲೆ ತಮ್ಮ ಸೂಚನೆಗಳೇನಾದರೂ ಇದ್ದಲ್ಲಿ ತಿಳಿಸಬೇಕೆಂದು ಹೇಳುತ್ತೇನೆ. ಬೇರೆ ಅನಾವಶ್ಯಕವಾದ ಅಂಶಗಳನ್ನು ಹೇಳಿ ಕಾಲಹರಣ ಮಾಡುವುದು ಸರಿಯಲ್ಲ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ನಾನು ಸಲಹೆ ಮಾಡಿದಹಾಗೆ ಈ ಮಸೂದೆಯನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸದೆ ಇದ್ದಿದ್ದರೆ, ಇಷ್ಟು ಚರ್ಚೆಗೆ ಅವಕಾಶವೇ ಆಗುತ್ತಿರಲಿಲ್ಲವೆಂದು ನಾನು ಹೇಳುತ್ತೇನೆ. ಈ ಮಸೂದೆಯಮೇಲೆ ಮಾಡಿರತಕ್ಕ ಸೆಲೆಕ್ಟ್ ಕಮಿಟಿ ವರದಿಯ 16ನೆಯ ಕ್ಲಾಜಿನಲ್ಲಿ ಹೇಳಿರುವ ವಿಷಯದ ಮೇಲೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಅದರಲ್ಲಿ ಈರೀತಿ ಹೇಳಿದ್ದಾರೆ. "We consider that it is necessary to reduce the rate of tax on stage carriages plying on such roads."

4-30 P.M.

ಇಲ್ಲಿ ಹೀಗೆ ಹೇಳಿರುವುದರ ಉದ್ದೇಶವಾದರೂ ಏನು? ಇದರ ಉದ್ದೇಶವನ್ನು ನೋಡಿದರೆ ಸರ್ಕಾರದವರಿಗೆ ರಸ್ತೆಗಳನ್ನು ದುರಸ್ತಿಮಾಡಿಸಬೇಕೆಂಬ ಉದ್ದೇಶವಿಲ್ಲವೆಂಬುದಾಗಿ ಕಂಡುಬರುತ್ತದೆ. ಯಾವ ಯಾವ ರಸ್ತೆಗಳು ಹೇಗೆ ಯಾವ ಯಾವ ಸ್ಥಿತಿಯಲ್ಲಿರುತ್ತವೋ ಆ ಸ್ಥಿತಿಗಳನ್ನು ನೋಡಿಕೊಂಡು ಆಯಾ ರಸ್ತೆಗಳಿಗೆ ಅಷ್ಟಷ್ಟೇ ಟ್ಯಾಕ್ಸನ್ನು ಹಾಕುತ್ತೇವೆಂದು ಹೇಳಿದ್ದಾರೆ. ಆದರೆ ಹೀಗೆ ಮಾಡುವುದು ಸರಿಯಾದ್ದಲ್ಲ. ದೇಶದಲ್ಲಿರತಕ್ಕ ಪ್ರತಿಯೊಂದು ರಸ್ತೆಯನ್ನೂ ಉತ್ತಮಪಡಿಸತಕ್ಕದ್ದು ಸರ್ಕಾರದವರ ಕರ್ತವ್ಯ. ಹಾಗಿರುವಾಗ ಅವರು ರಸ್ತೆಗಳನ್ನು ಉತ್ತಮಪಡಿಸುತ್ತೇವೆಂದು ಹೇಳುವುದಕ್ಕೆ ಪ್ರತಿಯಾಗಿ ಅಂಥ ರಸ್ತೆಗಳಿಗೆ ಟ್ಯಾಕ್ಸನ್ನು ಕಡಮೆ ಮಾಡುತ್ತೇವೆಂದು ಹೇಳುವುದು ಖಂಡಿತ ಸರಿಯಾದದ್ದಲ್ಲ. ದೇಶದಲ್ಲಿರತಕ್ಕ ಪ್ರತಿಯೊಂದು ರಸ್ತೆಗೂ ಸರ್ಕಾರದವರು ಒಂದೇಸಮನಾದ ಟ್ಯಾಕ್ಸನ್ನು ಹಾಕಲಿ, ಅದಕ್ಕೆ ನಾನು ಬೇಡವೆನ್ನುವುದಿಲ್ಲ. ಆದರೆ ಈ ರಸ್ತೆಗಳನ್ನು ಉತ್ತಮಪಡಿಸತಕ್ಕ ಬಗ್ಗೆ ಈಗ ಸರ್ಕಾರದವರು ತಾಳಿರುವ ಮನೋಭಾವ ಹೋಗಬೇಕೆಂದು ಹೇಳುತ್ತೇನೆ.

ಇನ್ನು ಕ್ಲಾಜ್ 4ರಲ್ಲಿ ಸರ್ಕಾರದವರು ಖಚಿತವಾಗಿ ವಿಷಯ ತಿಳಿಸದೆ ಬಹಳ ವೇಗ್ ಆಗಿ ಹೇಳಿದ್ದಾರೆ. In case of half-yearly and annual licences, such rebate in respect of the tax as may be prescribed shall be paid ಎಂದು ಹೇಳಿರತಕ್ಕದ್ದು ಅಸ್ಪಷ್ಟವಾಗಿದೆ. ಸರ್ಕಾರದವರು ಯಾವುದಾದರೊಂದು ಕಾನೂನನ್ನು ತರುವಾಗ ಹೀಗೆ ಮಾಡಿದರೆ ಹಾಗಾಗುತ್ತದೆ, ಹಾಗೆ ಮಾಡಿದರೆ ಹೀಗಾಗುತ್ತದೆ. ಅದಕ್ಕಿಷ್ಟು ರಿಬೇಟ್ ಕೊಡುತ್ತೇವೆ ಎಂದು ಖಚಿತವಾಗಿ ಹೇಳಿಲ್ಲ. 'ಕೇವಲ ಇಲ್ಲಿ 6 ತಿಂಗಳ ವಿಚಾರ ಹೇಳಲಾಗಿದೆ. ಮೂರು ತಿಂಗಳಬಗ್ಗೆ ಸರ್ಕಾರದವರೇನೂ ಹೇಳಿಲ್ಲ. ಇಲ್ಲಿ ಟ್ಯಾಕ್ಸ್ ಕಟ್ಟಲು ಒಬ್ಬ ಸಾಲಮಾಡಬಹುದು. ಹಾಗೆ ಸಾಲತರುವಾಗ ಅವನು ಬಡ್ಡಿ ಕೊಡಲೇಬೇಕು. 3 ತಿಂಗಳಾದರೇನು ; 6 ತಿಂಗಳಾದರೇನು ? ಅಷ್ಟೇಅಲ್ಲದೆ ಇಷ್ಟು ರಿಬೇಟ್ ಕೊಡಲಾಗುತ್ತೆಂಬುದನ್ನು ನಿಗದಿಮಾಡಿಲ್ಲ. ಬಹಳ ವೇಗ್ ಆಗಿ ಹೇಳಿದ್ದಾರೆ.

ಶ್ರೀ ಆರ್. ಚೆನ್ನಿಗರಾಮಯ್ಯ (ಸ್ಥಳೀಯ ಸಂಸ್ಥೆಗಳ ಮಂತ್ರಿಗಳು).—ಈಗ ಇದು ಆಕ್ಟ್ ಆಗಬೇಕು. ಈ ಮಸೂದೆ ಪಾಸಾಗಿ ಆಕ್ಟ್ ಆದನಂತರ ಇದಕ್ಕೆ ರೂಲ್ಸ್ ಬೇರೆ ಬರುತ್ತವೆ. ಆಗ ಅವುಗಳಲ್ಲಿ ಇದನ್ನೆಲ್ಲಾ ವಿಶದವಾಗಿ ತಿಳಿಸಲಾಗುತ್ತದೆ. ಮೂಲ ಆಕ್ಟಿನಲ್ಲಿ ಈ ವಿಚಾರಗಳೆಲ್ಲ ಬರುವುದಿಲ್ಲ.

ಶ್ರೀ ಸಿ. ಎಂ. ಪೂಣಚ್ಚ.—ಸರ್ಕಾರದವರು ಈ ಬಗ್ಗೆ ಪ್ರಕಟಿಸತಕ್ಕ ನೋಟಿಫಿಕೇಷನ್‌ಗಳ ಬಗ್ಗೆ ಈ ಅಧಿವೇಶನ ಕುರಿತು 30 ದಿವಸಗಳ ಅವಧಿಯೊಳಗೇನಾದರೂ ಬದಲಾವಣೆಯಾದರೆ ಅಂಥ ಬದಲಾವಣೆಗಳನ್ನೂ ಸಹ ಆ ನೋಟಿಫಿಕೇಷನಿಗೆ ಸೇರಿಸಿ ಪ್ರಕಟಿಸಬೇಕೆಂದು ಹೇಳಿದ್ದೇವೆ. ಇಲ್ಲದೆ ಇದ್ದರೆ ಅಂಥ ನೋಟಿಫಿಕೇಷನ್ ಜಾರಿಗೆ ಬರುವುದಿಲ್ಲವೆಂದು ಸಹ 16ನೆಯ ಕ್ಲಾಜಿನಲ್ಲಿ ನಮೂದಿಸಿದೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಬಸ್ಸುಗಳಿಗೆ ಲೈಸನ್ಸ್ ಕೊಡತಕ್ಕ ವಿಚಾರದಲ್ಲಿ ಈಗ ಅಧಿಕಾರವನ್ನು ಸ್ಟೇಟ್ ಟ್ರಾನ್ಸ್‌ಪೋರ್ಟ್ ಅಥಾರ್ಟಿಗೆ ವಹಿಸಿದ್ದೀರಿ. ಆದ್ದರಿಂದ ಬಸ್ ಮಾಲೀಕರುಗಳು ಸ್ಟೇಟ್ ಟ್ರಾನ್ಸ್‌ಪೋರ್ಟ್ ಅಥಾರ್ಟಿ ಇರುವ ಸ್ಥಳಕ್ಕಾಗಲಿ ಅಥವಾ ಜಿಲ್ಲಾ ಕಸಬೆಗಳಿಗಾಗಲಿ ಬರಲು ಕಷ್ಟವಾಗುತ್ತದೆ. ಈ ಕಾರಣದಿಂದ ಬಸ್ ಲೈಸನ್ಸುಗಳನ್ನು ತಾಲ್ಲೂಕ್ ಲೆವಲ್‌ನಲ್ಲಿ ಕೊಡುವಂತೆ ಏರ್ಪಾಟುಮಾಡಬೇಕೆಂದು ಹೇಳುತ್ತೇನೆ. ಹೀಗಾದರೆ ಬಸ್ ಮಾಲೀಕರುಗಳಿಗೆ ಬಹಳ ಅನುಕೂಲವಾಗುತ್ತದೆ. ಆದರೆ ಲೈಸನ್ಸ್ ಮಂಜೂರು ಮಾಡುವ ವಿಷಯದಲ್ಲಿ ನಾನು ಒಂದು ಅಂಶವನ್ನು ಸರ್ಕಾರದವರ ಗಮನಕ್ಕೆ ತರಲಿಚ್ಛಿಸುತ್ತೇನೆ. ಅದೇನೆಂದರೆ ಸರ್ಕಾರದವರು ದುಡ್ಡು ಕೊಡತಕ್ಕವರಿಗೆಲ್ಲ ಬಸ್ ಲೈಸನ್ಸುಗಳನ್ನು ಮಂಜೂರುಮಾಡಬಾರದೆಂದು ಹೇಳುತ್ತೇನೆ. ಹಾಗೆ ಲೈಸನ್ಸುಗಳನ್ನು ಕೊಡುವಾಗ ಮತ್ತು ರಿನ್ಯೂ

ಮಾಡುವಾಗ ಬಸ್ಸಿನ ಬಾಡಿ ಭದ್ರವಾಗಿದೆಯೇ, ಪ್ರಯಾಣಿಕರಿಗೆ ಅನುಕೂಲವಾಗಿ ಅಪಾಯವಿಲ್ಲದ ರೀತಿಯಲ್ಲಿರುತ್ತದೆಯೇ ಎಂಬುದನ್ನು ಸರ್ಕಾರದ ಅಂಗವಾಗಿರುವ ರೋಡ್‌ಟ್ರಾನ್ಸ್‌ಪೋರ್ಟ್ ಅಥಾರ್ಟಿಯವರ ಬಾಡಿ ಬಿಲ್ಡಿಂಗ್ ವರ್ಕ್‌ಷಾಪಿನ ಅಥಾರ್ಟಿಯಿಂದ ಒಂದು ಸರ್ಟಿಫಿಕೇಟನ್ನು ಪಡೆಯುವಂತೆ ಒಂದು ನಿರ್ಬಂಧ ಹಾಕಬೇಕೆಂಬುದು ನನ್ನ ಒಂದು ಸಲಹೆ. ಇದರಿಂದ ಜನರ ಸುರಕ್ಷತೆಯನ್ನು ಕಾಪಾಡಿದಂತಾಗುತ್ತದೆ. ಸರ್ಕಾರಿ ಬಸ್ಸುಗಳ ಬಾಡಿ ಬಿಲ್ಡ್‌ಮಾಡತಕ್ಕ ಒಂದು ಸರ್ಕಾರಿ ವರ್ಕ್‌ಷಾಪಿರುವಾಗ ಈರೀತಿ ಒಂದು ನಿಬಂಧನೆಯನ್ನೇಕೆ ಇವರು ಮಾಡಬಾರದು ? ಆದರೆ ಇದೇ ಸಂದರ್ಭದಲ್ಲಿ ನಾನು ಮತ್ತೊಂದು ವ್ಯಸನಕರವಾದ ಸಮಾಚಾರ ಕೇಳುತ್ತೇನೆ. ಆದರೆ ಅದೆಷ್ಟು ನಿಜವೋ ಸುಳ್ಳೋ ಆ ಸಂಗತಿ ನನಗೆ ತಿಳಿಯದು. ಸರ್ಕಾರದವರು ನಿಜವಾಗಿದ್ದರೆ ಆ ಸಂಗತಿಯನ್ನು ನಿಜವೆಂದು ಹೇಳಲಿ-ಇಲ್ಲವೇ ನಿಜವಲ್ಲವೆಂದಾದರೂ ಹೇಳಲಿ. ಆ ವ್ಯಸನಕರವಾದ ವಿಚಾರವೇನೆಂದರೆ ಈಗ ಸರ್ಕಾರಿ ಬಸ್ಸುಗಳ ಬಾಡಿ ಕಟ್ಟಿಸಲು ಅವುಗಳನ್ನು H.A.L.ಗೆ ಕಳುಹಿಸಿಕೊಡಲಾಗುತ್ತಿದೆ. ಅದು ಕೇಂದ್ರ ಸರ್ಕಾರದವರಿಂದ ನಡೆಸಲ್ಪಡುತ್ತಿರುವ ಒಂದು ಉದ್ಯಮ. ಆದ್ದರಿಂದ ಅದು ನೇರವಾಗಿ ನಮ್ಮ ಸರ್ಕಾರದ ಆಡಳಿತಕ್ಕೊಳಪಡದಿದ್ದಾಗ್ಯೂ ಇಂಡಿಯಾ ಸರ್ಕಾರದಿಂದ ನಡೆಸಲ್ಪಡುತ್ತಿರುವುದರಿಂದ ಅದನ್ನು ಒಂದು ಸರ್ಕಾರಿ ಉದ್ಯಮವೆಂತಲೇ ಭಾವಿಸಬಹುದು. ಹೀಗಿರುವಾಗ ಸ್ಟೇಟ್ ಸರ್ಕಾರದ ಬಸ್ಸುಗಳನ್ನು ಈ H.A.L. ನಲ್ಲಿ ಬಾಡಿ ಕಟ್ಟಿಸಲು ನೇರವಾಗಿ ನಮ್ಮ ಸರ್ಕಾರವೇ ಈ ವ್ಯವಹಾರ ನಡೆಸಬಹುದು. ಹಾಗೆ ಮಾಡದೆ ಈಗ ನಮ್ಮ ಸರ್ಕಾರ ಮಧ್ಯೆ ಒಬ್ಬ ಏಜಂಟರನ್ನು ಇಟ್ಟುಕೊಂಡು ಅವರ ಮೂಲಕ ಸರ್ಕಾರಿ ಬಸ್ಸುಗಳ ಬಾಡಿಯನ್ನು ಕಟ್ಟಿಸಲಾಗುತ್ತಿದೆಯೆಂದೂ ಇದರಿಂದ ಬಹಳ ಹಣ ನಷ್ಟವಾಗುತ್ತಿದೆಯೆಂದೂ ನಾನು ಕೇಳುತ್ತಿದ್ದೇನೆ.

ಚೇರ್ಮನ್ ಅವರು.—ವರ್ಕ್‌ಷಾಪಿಗೂ ಈಗ ಸಭೆಯ ಮುಂದಿರುವ ಮಸೂದೆಗೂ ಏನು ಸಂಬಂಧ ?

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಸಂಬಂಧವಿದೆ. ದುಡ್ಡು ಕೊಟ್ಟವರಿಗೆಲ್ಲ ಲೈಸೆನ್ಸ್ ಮಂಜೂರುಮಾಡಬಾರದೆಂದು ಹೇಳಿದೆ. ಕಾರಣ ಬಸ್ಸುಗಳ ಬಾಡಿ ಸುಭದ್ರವಾಗಿಲ್ಲದಿದ್ದರೆ ಪ್ರಯಾಣಮಾಡತಕ್ಕ ಜನರಿಗೆ ಅಪಾಯ ಒದಗಬಹುದು. ಅಂಥಾದ್ದಕ್ಕೆ ಅವಕಾಶವಿಲ್ಲದಂತೆ ಸರ್ಕಾರ ಸೂಕ್ತ ಕಾರ್ಯಕ್ರಮವನ್ನು ಕೈಗೊಳ್ಳಲೆಂದು ನಾನೀಗ ಈ ವಿಷಯವನ್ನು ಸೂಚನೆ ಮಾಡುತ್ತಿದ್ದೇನೆ. ಮುಂದೆ ಸರ್ಕಾರದವರು ಇದನ್ನು ಇಷ್ಟವಿದ್ದರೆ ಮಾಡಲಿ-ಇಲ್ಲದಿದ್ದರೆ ಬಿಡಲಿ. ಇನ್ನು ನಾನಾಗಲೇ ಹೇಳಿದ ಆ ಮಧ್ಯಸ್ಥಗಾರರ ಮೂಲಕ ಬಾಡಿ ಕಟ್ಟಿಸತಕ್ಕ ನೀತಿಯಿಂದ ಸರ್ಕಾರಕ್ಕೆ ತುಂಬ ಕೆಟ್ಟ ಹೆಸರು ಬರುತ್ತದೆ. ಸರ್ಕಾರದ ದುಡ್ಡೂ ಸಹ ಹಾಳಾಗುತ್ತದೆ. ಹೀಗೆ ಸರ್ಕಾರದವರು ತಾವೇ ನೇರವಾಗಿ ಆರ್ಡರ್ ಪ್ಲೇಸ್‌ಮಾಡದೆ ಮಧ್ಯಸ್ಥಗಾರರಿಗೇಕೆ ಕಮಿಷನ್ ಕೊಡಬೇಕು ? ಈ ವಿಚಾರವೇನು ನಿಜವೇ ಅಥವಾ ಅಲ್ಲವೇ ಎನ್ನುವುದನ್ನು ಸರ್ಕಾರದವರು ತಿಳಿಸಬೇಕಾಗಿದೆ. ನಾನೇನೋ ಜನರಾಡಿಕೊಳ್ಳುತ್ತಿರುವುದನ್ನು ಅವರ ಗಮನಕ್ಕೆ ತಂದಿದ್ದೇನೆ. ಇನ್ನು ಈ ಅಪೀಲ್ ವಿಚಾರವಾಗಿ ಕೆಲವು ವಿಷಯಗಳನ್ನು ತಿಳಿಸಬೇಕೆಂದಿದ್ದೆ. ಆದರೆ ಆಗಲೇ ಮಾನ್ಯ ಸಚಿವರು ಈ ಸಂಬಂಧವಾಗಿ ಬೇರೊಂದು ರೂಲ್ಸ್ ಬರಲಿವೆಯೆಂದು ಹೇಳಿದ್ದಾರೆ. ಅದರಿಂದ ನಾನಿನ್ನು ಹೆಚ್ಚಿಗೆ ಈ ಮಸೂದೆ ಬಗ್ಗೆ ಮಾತನಾಡಲಿಚ್ಛಿಸುವುದಿಲ್ಲ.

ಇನ್ನು ಸರ್ಕಾರದವರು ಟ್ರಾನ್ಸ್‌ಪೋರ್ಟ್ ಬಾಬಿನಿಂದ ಸ್ಥಳೀಯ ಸಂಸ್ಥೆಗಳಿಗೆ ಎಂದರೆ—ಜಿಲ್ಲಾ ಬೋರ್ಡ್-ವಿಲೇಜ್ ಪಂಚಾಯಿತಿ, ಮುನಿಸಿಪಾಲಿಟಿಗಳಿಗೆ ಕೊಡಬೇಕಾಗಿರತಕ್ಕ ಹಣದ ಬಗ್ಗೆ ಕ್ಲಾಜ್ 20 (ii) ರಲ್ಲಿ ತಿಳಿಸಲಾಗಿದೆ. ಆದರೆ ಈವರೆಗೂ ಆರೀತಿ ಯಾವ ಹಣವನ್ನೂ ಪಾವತಿಮಾಡಿಲ್ಲ. ಅದನ್ನು ಬೇಗ ಪಾವತಿಮಾಡಿಸಬೇಕೆಂದು ಸಲಹೆ ಮಾಡುತ್ತೇನೆ. ಸ್ವಾಮಿ, ನಾನಿನ್ನು ಒಂದು ವಿಚಾರ ಮಾತ್ರ ತಿಳಿಸಿ ನನ್ನ ಮಾತುಗಳನ್ನು ಮುಗಿಸಬೇಕೆಂದಿದ್ದೇನೆ. ವ್ಯವಸಾಯ ಸಂಬಂಧವಾಗಿ ಉಪಯೋಗಿಸತಕ್ಕ ವಾಹನಗಳಿಗೆ ಕೆಲವು ರಿಯಾಯಿತಿಗಳನ್ನು ಕೊಡಲಾಗುತ್ತದೆಂದು ತಿಳಿಸೋಣವಾಗಿದೆ. ಆದರೆ ನಾನೂ ಸಹ ಒಬ್ಬ ರೈತನೇ. ನನಗೂ ಹೊಲ-ಗದ್ದೆ-ಮನೆಗಳಿವೆ. ರೈತನಾಗಿ ನಾನು ಸರ್ಕಾರಕ್ಕೆ ಕಂದಾಯ ಕೊಡುತ್ತೇನೆ. ನೀವು ಈರೀತಿ ಒಂದು ವಿನಾಯಿತಿಯನ್ನು ಏಕೆ ತರುತ್ತಿದ್ದೀರಿ ಎಂದರೆ ನಾಳೆ ಹೊಸ ನಮೂನೆಯ ಭೂಸುಧಾರಣೆಗಳು ಜಾರಿಗೆ ಬರಲಿವೆ. ಆ ತರುವಾಯ ಒಬ್ಬ ರೈತನಿಗೆ ಇಂಥ ಮೆಷಿನರಿಗಳನ್ನಿಟ್ಟುಕೊಂಡು ವ್ಯವಸಾಯಮಾಡಲು ಆತನಿಗೆ ಜಮೀನೆಷ್ಟಿರಬೇಕು ಏನು ಎತ್ತ ಎನ್ನುವ ಅಂಶವನ್ನು ಗಮನಿಸಿದರೆ ನಾಳೆ ಯಾರಿಗೂ ಅಷ್ಟೊಂದು ಜಮೀನನ್ನು ಇಟ್ಟುಕೊಳ್ಳಲು ಅವಕಾಶವಿರುವಂತೆ ಕಂಡು ಬರುತ್ತಿಲ್ಲ. ಯಾರಿಗೇ ಆಗಲಿ ಇಷ್ಟು ಯಂತ್ರೋಪಕರಣಗಳನ್ನಿಟ್ಟುಕೊಂಡು ವ್ಯವಸಾಯ ನಡೆಸುವಷ್ಟು ಜಮೀನುಗಳು ಇರಲಾರವು. ಹೀಗಿರುವಾಗ ಈ ಶಾಸನ ನಿಯಮವೆಷ್ಟರಮಟ್ಟಿಗೆ ಜಾರಿಗೆ ಬರುತ್ತದೋ ನೋಡಬೇಕಾಗಿದೆ. ಇದರಲ್ಲಿ ಸರ್ಕಾರದವರಿಗೆ ಅರೆ ಮನಸ್ಸಿದೆಯೋ ಅಥವಾ ಪೂರಾ ಮನಸ್ಸಿದೆಯೋ ಎಂಬುದು ನಾಳೆ ಗೊತ್ತಾಗಬೇಕು.

ಚೇರ್ಮನ್ ಅವರು.—ಈಗ ನಮ್ಮ ಮುಂದೆ ಲ್ಯಾಂಡ್ ರಿಫಾರಂಸ್ ಮಸೂದೆ ಬಂದಿಲ್ಲ. ಆದ್ದರಿಂದ ತಾವು ಸಭೆಯ ಮುಂದಿರುವ ವಿಚಾರ ಬಿಟ್ಟು ಬೇರೆ ವಿಚಾರವನ್ನು ಪ್ರಸ್ತಾಪಿಸುವುದು ಕ್ರಮಬದ್ಧವಲ್ಲ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಸ್ವಾಮಿ, ನನಗೆ ಇವೊತ್ತೂ ಅಧ್ಯಕ್ಷರಲ್ಲಿ ಬಹಳ ವಿಶ್ವಾಸವಿದೆ. ಈರೀತಿ exemption ಕೊಡುವುದರಿಂದ ಸ್ವಲ್ಪ ತೊಂದರೆ ಇದೆ. ಇಂಥದಕ್ಕೆ ಉತ್ತೇಜನ ಕೊಡುವುದರಿಂದ ಜನಗಳ ಗತಿ ಏನು, ದನಗಳ ಗತಿ ಏನು ? ಇನ್ನು ಮುಂದೆ ದನಗಳನ್ನು ಯಾರೂ ಪೋಷಣೆಮಾಡುವುದಿಲ್ಲ. ವಿನಾಯಿತಿಯನ್ನು ಕೊಡುವುದರಿಂದ ದನಕರುಗಳನ್ನು ಕಟ್ಟಿಕೊಂಡು ಅದನ್ನು ಪೋಷಣೆಮಾಡುವ ಕೆಲಸಕ್ಕೆ ಯಾರೂ ಬರುವುದಿಲ್ಲ. ಲಾರಿವಗೈರೆ ಇಟ್ಟುಕೊಂಡು ಸುಲಭವಾಗಿ ವ್ಯವಸಾಯ ಮಾಡಿಕೊಳ್ಳುವುದಕ್ಕೆ ಪ್ರಯತ್ನಮಾಡುತ್ತಾರೆ. ಇದರಿಂದ ದನಗಳನ್ನು ಪೋಷಣೆಮಾಡುವ ಜವಾಬ್ದಾರಿ ನಮ್ಮಲ್ಲಿ ಕಡಮೆಯಾಗುತ್ತದೆ. ಜೊತೆಗೆ ಇನ್ನೂ ಒಂದು ವಿಷಯವನ್ನು ಹೇಳುವುದಾದರೆ ಲಾರಿಗಳನ್ನು ಇಟ್ಟುಕೊಂಡು ಅದರಲ್ಲಿ ಗೊಬ್ಬರ ಸಾಗಿಸುವ ಜನಗಳಿಗೆ ವಿನಾಯಿತಿಯನ್ನು ಕೊಡುವುದೆಂದರೆ, ನನಗಂತೂ ಅರ್ಥವಾಗುವುದಿಲ್ಲ. ಈ ವಿನಾಯಿತಿ ಬಡವರಿಗೆ ದೊರೆಯುವುದಿಲ್ಲ. ನನ್ನಂಥವರಿಗಾಗಲಿ, ನನಗಿಂತ ಕಡಮೆ ಜಮೀನು ಇರುವವರಿಗಾಗಲಿ ಇದರ ಪ್ರತಿಫಲ ದೊರೆಯುವುದಿಲ್ಲ. ಯಾರಿಗೋ ದೊರೆಯುತ್ತದೆ. ಆದ್ದರಿಂದ ವಿನಾಯಿತಿಯನ್ನು ಯಾರಿಗೂ ಕೊಡುವುದು ಬೇಡ, ಎಲ್ಲರಿಗೂ ಒಂದೇಸಮನಾಗಿ ಇರಲಿ. ಯಾವ ಸೋಷಿಯಲಿಸ್ಟಿಕ್ ಪ್ಯಾಟರ್ನ್ ಎಂದು ಹೇಳುತ್ತಾರೋ ಅದು ಇದರಲ್ಲಿ ಬರುವುದಿಲ್ಲ. ಆ ವಿನಾಯಿತಿ ಕೊಡುವುದು ಬೇಡ

(ಶ್ರೀ ಬಿ. ಕೆ. ಪುಟ್ಟರಾಮಯ್ಯ)

ಎಂದು ಹೇಳುತ್ತೇನೆ. ಇನ್ನುಳಿದ ವಿಷಯಗಳಿಗೆ ನಾನು ಹೋಗುವುದಿಲ್ಲ. ಅವು ಸರ್ಕಾರಕ್ಕೆ ಸಂಬಂಧಪಟ್ಟದ್ದು.

ಶ್ರೀ ಸಿ. ಎಂ. ಪೂಣಚ್ಚ.—ಅವು ಸಮರ್ಪಕವಾಗಿವೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಸಮರ್ಪಕವಾಗಿದೆ ಎಂದು ಹೇಳುತ್ತಿಲ್ಲ, ವಿರೋಧಮಾಡುವುದಿಲ್ಲ. ಆ ವಿಷಯವನ್ನು ಸರ್ಕಾರದವರಿಗೆ ಬಿಟ್ಟಿದ್ದೇನೆ. ಅವುಗಳ ಮೇಲೆ ಮಾತನಾಡುತ್ತ ಹೋದರೆ ಬಹಳ ಹೊತ್ತಾಗುತ್ತದೆ. ಇನ್ನೂ ಇತರ ಮಾನ್ಯ ಸ್ನೇಹಿತರು ಮಾತನಾಡುವವರಿದ್ದಾರೆ ಆದ್ದರಿಂದ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಎಸ್. ವೈ. ಪಾಟೀಲ್ (ಸಿಂದಗಿ).—ಮಾನ್ಯ ಅಧ್ಯಕ್ಷರೇ, ಈ ಸಭಾಗೃಹದ ಮುಂದಿರುವ ಬಿಲ್ಲಿಗೆ ನಾನು ಅನುಮೋದನೆಯನ್ನು ಕೊಟ್ಟು ಶ್ರೀಮಾನ್ ಮುಕ್ಕಣ್ಣಪ್ಪನವರು ಏನು ಮಾತನಾಡಿದರೋ ಆ ಬಗ್ಗೆ ಒಂದೆರಡು ಮಾತು ಹೇಳಬೇಕಾಗಿದೆ. ಸಾಧಾರಣವಾಗಿ ಯಾವುದೇ ಕಾಯಿದೆಯನ್ನು ಮಾಡಿದರೂ ಸಹಿತ ಅದನ್ನು ಅಮಲ್ ಬಜಾವಣೆಮಾಡುವುದು ಸರ್ಕಾರದ ಜವಾಬ್ದಾರಿ ಇದೆ. ಸರ್ಕಾರದ ನೌಕರದಾರರ ಮೇಲಿದೆ, ಜನತೆಯ ಮೇಲೆ ಯಾವ ತರಹ ಜವಾಬ್ದಾರಿಯೂ ಇಲ್ಲವೆನ್ನತಕ್ಕ ಒಂದು ಭಾವನೆ ಇರುವುದು ಕಾಣುತ್ತದೆ. ಅದರ ಸಲುವಾಗಿ ಮಾನ್ಯ ಮುಕ್ಕಣ್ಣಪ್ಪನವರು ಹೇಳಿದ ವಿಷಯು ಪೂರ್ಣ ಸತ್ಯವೆಂದು ಹೇಳುತ್ತಿಲ್ಲ, ಆದರೆ ಅದನ್ನು ಅಲ್ಲಗಳೆಯುವುದಕ್ಕೂ ಪ್ರಯತ್ನಮಾಡುವುದಿಲ್ಲ ಆದರೆ ಮುಖ್ಯವಾಗಿ ಇವೊತ್ತು ಯಾವುದೇ ಕಾಯಿದೆ ಮಾಡಿದರೂ ಸಹಿತ ಕಾಯಿದೆಯ ಉಲ್ಲಂಘನೆಯನ್ನು ಸರ್ಕಾರಿ ಅಧಿಕಾರಿಗಳು ಮಾಡುತ್ತಿದ್ದರೆ ಅದಕ್ಕೆ ಜನತೆ ಪ್ರೋತ್ಸಾಹ ಕೊಡುತ್ತದೆ ಎನ್ನುವ ಮಾತನ್ನು ತಿಳಿಯಬೇಕು. ಏಕೆಂದರೆ ನಮಗೆ ಅನುಕೂಲವಿದ್ದಾಗ ಅದನ್ನು ಸಮರ್ಥಿಸಿ ಅನಾನುಕೂಲವಾದಾಗ ಅದನ್ನು ವಿರೋಧಿಸುವುದು ಸೂಕ್ತವಾದ ಮಾರ್ಗವಲ್ಲ. ತೊಂದರೆಗಳು ಏಕೆ ಉಂಟಾಗುತ್ತವೆ ಎಂದು ತಿಳಿದು ಅವುಗಳನ್ನು ನಿವಾರಣೆಮಾಡಬೇಕಾಗಿದೆ. ಮಾನ್ಯ ಮುಕ್ಕಣ್ಣಪ್ಪನವರು ಅತಿಶಯೋಕ್ತಿಯಾಗಿ ಈ ವಿಷಯವನ್ನು ಹೇಳಿದ್ದಾರೆ. ಈ ತೊಂದರೆ ನಿವಾರಣೆಯಾಗಬೇಕಾದರೆ, ಸಣ್ಣ ಟ್ಯಾಕ್ಸ್‌ಗಳು ಹೆಚ್ಚಾಗಬೇಕು. ಆಗ ಪರಿಸ್ಥಿತಿ ಉತ್ತಮವಾಗುತ್ತದೆ.

[MR. DEPUTY SPEAKER in the Chair.]

ಯಾವುದೇ ಟ್ಯಾಕ್ಸ್ ಸರಿಯಾಗಬೇಕಾದರೆ, ಇರತಕ್ಕ ತೊಂದರೆ ನಿವಾರಣೆಯಾಗಬೇಕಾದರೆ, ಒಂದು ಬಸ್ಸಿಗೆ ಹೆಚ್ಚಾಗುತ್ತದೆ, ಮತ್ತೊಂದು ಬಸ್ಸಿಗೆ ಕಡಮೆಯಾಗುತ್ತದೆ, ಅಂಥ ಪರಿಸ್ಥಿತಿಯಲ್ಲಿ ಪ್ರೈವೇಟ್ ಕಾರುಗಳನ್ನು ಹೊಂದಿರುವವರಿಗೂ ಟ್ಯಾಕ್ಸ್‌ನಲ್ಲಿ ಬಡಾವಣೆಯುಂಟಾಗತಕ್ಕ ಸಂದರ್ಭ ಬರುತ್ತದೆ. ನಾನು ಎಲ್ಲ ಮಾನ್ಯ ಸದಸ್ಯರಲ್ಲಿಯೂ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಸರ್ಕಾರ ಕಾಯಿದೆ ಮಾಡುವಾಗ ಅದಕ್ಕೆ ಸೂಕ್ತ ಸಲಹೆ ಮಾಡಲಿಕ್ಕೆ ಅಭ್ಯಂತರವಿಲ್ಲ. ಆದರೆ ಅದನ್ನು ಅಮಲುಬಜಾವಣೆ ಮಾಡಲಿಕ್ಕೆ ದೇಶದ ಎಲ್ಲ ಜನತೆಯೂ ಸಹಕಾರಮಾಡಬೇಕೇ ಹೊರತು ಕೇವಲ ಕಾಯಿದೆ ಇದೆ, ಸ್ವಲ್ಪ ಜನ ನೌಕರರು ತಪ್ಪು ಮಾಡುತ್ತಾರೆಂದು ಹೇಳಬಾರದು. ನೌಕರದಾರರು ತಪ್ಪುಮಾಡುವುದು ಜನತೆ ಪ್ರೋತ್ಸಾಹ ಮಾಡುತ್ತದೆನ್ನುವ ದೃಷ್ಟಿಯಿಂದ ಎಂಬುದನ್ನು ಅತ್ಯವಶ್ಯವಾಗಿ ಲಕ್ಷ್ಯದಲ್ಲಿಡಬೇಕು. ಇದಕ್ಕೆ ಒಂದು ಉದಾಹರಣೆ ಹೇಳಬೇಕೆಂದರೆ ಮಾನ್ಯ ಸಭಾಧ್ಯಕ್ಷರು ಸಭೆಯಲ್ಲಿ ಇಬ್ಬರು ಸದಸ್ಯರು ಒಂದೇ ಸಲ ಏಳಬಾರದೆಂದು ಹೇಳುತ್ತ ಇದ್ದರೂ ಸಹ ಎಂಡು, ಮೂರು ಮಂದಿ ಏಳುವುದು ಸರ್ವಸಾಮಾನ್ಯವಾಗಿದೆ. ಯಾವುದೇ ಕಾಯಿದೆಯನ್ನು ಅಮಲುಬಜಾವಣೆ ಮಾಡಬೇಕಾದರೆ, ಸರ್ಕಾರಕ್ಕೆ ದುಡ್ಡು ಬಂದು. . . .

ಶ್ರೀ ಟಿ. ಹನುಮಯ್ಯ (ಚಳ್ಳಕೆರೆ).—ಸ್ವಾಮಿ, ಒಂದು ಪಾಯಿಂಟ್ ಆಫ್ ಆರ್ಡರ್. ಮಾನ್ಯ ಸದಸ್ಯರು ಅಮಲು ಬಜಾವಣೆ ಎಂದು ಹೇಳಿದರು. ನಮಗೆ ಅದರ ಅರ್ಥ ಗೊತ್ತಾಗುವುದಿಲ್ಲ.

ಉಪಾಧ್ಯಕ್ಷರು.—ಅದು ಪಾಯಿಂಟ್ ಆಫ್ ಆರ್ಡರಲ್ಲ. ಅದು clarification.

ಶ್ರೀ ಎಸ್. ವೈ. ಪಾಟೀಲ್.—ಇದು ಪರಿಹಾರವಾಗಬೇಕಾದರೆ ಸಾಧಾರಣವಾಗಿ ನಮಗೂ ಮತ್ತು ಇಲ್ಲಿನ ಮಾನ್ಯ ಮಿತ್ರರುಗಳಿಗೂ ಭಾಷೆಯಲ್ಲಿ ಹೊಂದಾಣಿಕೆಯಾಗಬೇಕು. ಭಾಷಾಮಿಲನವಾಗಬೇಕಾದರೆ, ನಾವು ಈ ಭಾಗದ ಭಾಷೆಯನ್ನು ತಿಳಿದುಕೊಳ್ಳಬೇಕು ; ಮತ್ತು ಈ ಭಾಗದ ಜನಗಳು ನಮ್ಮ ಭಾಗದ ಭಾಷೆಯನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನಮಾಡಬೇಕು. ನಾವೆಲ್ಲರೂ ಕೂಡಿ ಇಲ್ಲಿ ಅಸೆಂಬ್ಲಿ ಅಧಿವೇಶನವನ್ನು ನಡೆಸಬೇಕಾದರೆ ಭಾಷಾ ವಿಷಯದಲ್ಲಿ ಪಾಯಿಂಟ್ ಆಫ್ ಆರ್ಡರ್ ತೆಗೆಯುವುದಕ್ಕೆ ಸಾಧ್ಯವಿಲ್ಲ. ಯಾವುದಾದರೂ ವಿಷಯದ ಸಲುವಾಗಿ ಪಾಯಿಂಟ್ ಆಫ್ ಆರ್ಡರ್ ತೆಗೆಯಬಹುದು. ಆದುದರಿಂದ ನಾವುಗಳು ಒಬ್ಬರ ಭಾಷೆಯನ್ನು ಮತ್ತೊಬ್ಬರು ತಿಳಿಯುವುದಕ್ಕೆ ಅತ್ಯವಶ್ಯವಾಗಿ ಪ್ರಯತ್ನಮಾಡಬೇಕೆಂದು ನಮ್ರತೆಯಿಂದ ಹೇಳುತ್ತೇನೆ. . . .

Sri M. C. NARASIMHAN.—Sir, the Hon'ble Member seems to be only concerned with telling the other Members, how they should speak. Actually the subject under discussion is the Motor Vehicles Bill. If the Hon'ble Member confines his remarks to the Motor Vehicles Bill, more useful discussion would take place. On a previous occasion, Hon'ble Sri Puttaramiya was pulled up the Chair and asked to confine his remarks to the relevant portions of the Bill. What the Hon'ble Member is now trying to do is to traverse—if I may put it so—ten miles away from the subject. What he was trying to say is as to how the members should behave. He was trying to draw the analogy of what happened in this House earlier. How is it relevant ?

Mr. DEPUTY SPEAKER.—He was not saying all that.

Sri M. C. NARASIMHAN.—He was saying that the members should behave in this manner or that—what they should try to do. What should be done outside the floor of the House was also sought to be brought in for discussion.

Mr. DEPUTY SPEAKER.—I do not think that he was speaking on the behaviour of the members; he was only explaining on the point raised by Sri Hanumaiah.

ಶ್ರೀ ಎಸ್. ವೈ. ಪಾಟೀಲ್.—ಮಾನ್ಯ ಅಧ್ಯಕ್ಷರು ಹೇಳಿದ್ದು ಸರಿಯಾಗಿದೆ ಎಂದು ಮಾನ್ಯ ಮಿತ್ರರಾದ ನರಸಿಂಹನ್ ಅವರಿಗೆ ತಿಳಿಸುತ್ತೇನೆ. ನಾನು ಪಾಯಿಂಟ್ ಆಫ್ ಆರ್ಡರ್ ಎತ್ತಿದ ವಿಷಯದಲ್ಲಿ ಒಂದೆರಡು ಮಾತು ಹೇಳುತ್ತಿದ್ದೆ.

ಮಾನ್ಯ ಅಧ್ಯಕ್ಷರೆ, ನಾನು ಈ ಬಿಲ್ಲನ್ನು ಸಂಪೂರ್ಣವಾಗಿ ಅನುಮೋದಿಸುತ್ತಿದ್ದೇನೆ. ಮುಖ್ಯವಾಗಿ ಇವೊತ್ತು ತಾತ್ವಿಕವಾಗಿ ಒಕ್ಕಲುತನ ಮಾಡುವವರಿಗೆ ಸಹಾಯ ಮಾಡತಕ್ಕ ಸಲುವಾಗಿ ಕೆಲವು ಸೂಟಿ ಕೊಡಬೇಕು, ವಿನಾಯಿತಿ ಕೊಡಬೇಕು ಎಂದು ಪ್ರಾರ್ಥಿಸುತ್ತಿದ್ದೇನೆ. ಮಾನ್ಯ ಸದಸ್ಯರಲ್ಲಿ ಒಂದು ಮಾತು. ಯಾವುದೇ ಕಾಯಿದೆ ಅಮಲು ಬಜಾವಣೆಯಾಗಬೇಕಾದರೂ ಜನತೆಯ ಸಹಕಾರಬೇಕು. ಸರ್ಕಾರಕ್ಕೆ ಲಾಭವಾಗುವುದರ ಸಲುವಾಗಿ ಸಲಹೆಯನ್ನು ಕೊಡಬೇಕು ಎಂದು ಪ್ರಾರ್ಥನೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

Sri V. SRINIVAS SHETTY (Coondapoor).—I would not take up the time of the House very long. I would have very much liked to oppose the Bill, but I cannot, because this is not a Bill which will hit the poor. Generally speaking, it is the rich man who is being taxed under this measure.

Sir, I heard a lot about the transport administration of Mysore. How far these alle ations are true, I am not in a position to say. We have in South Kanara a number of transport services. I have my own differences with some of the owners. We have struck against them; I had taken pa t in strikes against them. But one thing that I have to admit in respect o the transport administration in South Kanara is that it is really very good and the employees of the bus services, when I compare the pay given in South Kanara with what is given even by the Government to its transport services here, is very favourable. When I made casual enquiries, I was astonished when certain employees of the Transport Services in Bangalore said that the pay given to a Bus Conductor and a Driver was much below the subsistence level. I would like to bring home to the Hon'ble Minister that this state of affairs should end. Government should not only try to tax the people but its employees should be treated very fairly. I would like to state it publicly that certain employees have made lots and lots of money, through corruption.

It is just possible that when you do not pay a man sufficiently to live, he takes bribery with both hands to make up for what he is not given. So the condition precedent to eradicate poverty is to give fair wages, fair salaries, so that they may live honourably in a city like Bangalore. I only wish to say this much as regards the condition of the employees of the Transport Service.

